# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮೇ 04, 2021

ಸಂಪುಟ : 47 ಸಂಚಿಕೆ : 351 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com


## ಬೆಡ್ ಹೆಚ್ಚಳ, ಆಕ್ಸಿಜನ್‌ಗೆ ಹೆಚ್ಚುವರಿ ವಾಹನ : ಸಂಸದ



ದಾವಣಗೆರೆ, ಮೇ 3 – ಪ್ರಸ್ತುತ ಜಿಲ್ಲಾ ಚಿಗಟೇರಿ ಆಸ್ಪತ್ರೆಯಲ್ಲಿ 348 ಆಕ್ಸಿಜನ್ ಬೆಡ್‌ಗಳನ್ನು ಹೆಚ್ಚಿಸಲು ಹಾಗೂ ಆಕ್ಸಿಜನ್ ಪೂರೈಕೆ ಸುಗಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿರುವ ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾಸ್ಪತ್ರೆಯಲ್ಲಿರುವ ಆಕ್ಸಿಜನ್ ಘಟಕದ ತಾಂತ್ರಿಕ ದೋಷಗಳನ್ನು ನಿವಾರಿಸಲಾಗುವುದು ಎಂದಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಗೆ ಸುಗಮ ಆಕ್ಸಿಜನ್ ಪೂರೈಕೆ, ಬೆಡ್ ವ್ಯವಸ್ಥೆ ಮತ್ತು ಔಷಧೋಪಚಾರದ ಕುರಿತು ಚರ್ಚಿಸಲು ಕರೆಯಲಾಗಿದ್ದ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಿಲ್ಲಾಸ್ಪತ್ರೆಯ ಮೆಡಿಕಲ್ ಆಕ್ಸಿಜನ್ ಪ್ಲಾಂಟ್‌ಗೆ ಹೆಚ್ಚುವರಿ ಆಕ್ಸಿಜನ್ ಪಡೆಯಲು ಹೆಚ್ಚುವರಿ ವಾಹನ ವ್ಯವಸ್ಥೆ ಮಾಡುವಂತೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಜಿಲ್ಲಾಸ್ಪತ್ರೆಯಲ್ಲಿ ಲಭ್ಯವಿರುವ ಆಕ್ಸಿಜನ್ ಪ್ರಮಾಣ ಪರಿಗಣಿಸಿ 348 ಬೆಡ್ ವ್ಯವಸ್ಥೆ ಮಾಡಲಾಗಿದೆ. ಇವು ಪೂರ್ಣ ಆಗಿವೆ. ಹೆಚ್ಚಿನ ಜನರು ಗುಣಮುಖರಾಗಿ ಬಿಡುಗಡೆಯಾಗುತ್ತಿರುವುದರಿಂದ ಬೆಡ್‌ಗಳ ಕೊರತೆ ಬರುವುದಿಲ್ಲ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಖಾಸಗಿ ಆಸ್ಪತ್ರೆಗಳ ಶೇ.75ರಷ್ಟು ಬೆಡ್‌ಗಳನ್ನು ಪಡೆಯಲು ಸರ್ಕಾರ ಅನುಮತಿ ನೀಡಿದೆ. ಅಗತ್ಯವಾದರೆ ಅವುಗಳನ್ನು ಪಡೆಯುವ ಜೊತೆಗೆ, ಛತ್ರಗಳಲ್ಲೂ ಸಹ ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರೆಯಲಾಗುವುದು ಎಂದರು.

> **ಜಿಲ್ಲಾಸ್ಪತ್ರೆಯಲ್ಲಿ ಲಭ್ಯವಿರುವ ಆಕ್ಸಿಜನ್ ಪ್ರಮಾಣ ಪರಿಗಣಿಸಿ, 348 ಬೆಡ್ ವ್ಯವಸ್ಥೆ ಮಾಡಲಾಗಿದೆ. ಈ ಆಕ್ಸಿಜನ್ ಬೆಡ್‌ಗಳು ಪೂರ್ಣ ಆಗಿವೆ. ಈಗ ಪ್ರತಿದಿನ 200-250 ಜನರು ಗುಣಮುಖರಾಗಿ ಬಿಡುಗಡೆಯಾಗುತ್ತಿರುವುದರಿಂದ ಬೆಡ್‌ಗಳ ಕೊರತೆ ಬರುವುದಿಲ್ಲ.**
> **- ಜಿ.ಎಂ. ಸಿದ್ದೇಶ್ವರ**

ಸರ್ಕಾರಿ ಆಸ್ಪತ್ರೆಗಳಲ್ಲಿ ರೆಮ್ಡಿಸಿವಿರ್ ಔಷಧ ಪೂರೈಕೆ ಇದ್ದು, ಖಾಸಗಿಯಲ್ಲಿ ಲಭ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಬಗ್ಗೆ ಸರ್ಕಾರದ ಬಳಿ ಚರ್ಚಿಸಲಾಗುವುದು ಎಂದರು.

ಇಂದು ಜಿಲ್ಲೆಗೆ ಹತ್ತು ಸಾವಿರದಷ್ಟು ಕೊರೊನಾ ಲಸಿಕೆ ಬರುವ ನಿರೀಕ್ಷೆ ಇದೆ. ಲಸಿಕೆ (2ನೇ ಪುಟಕ್ಕೆ)

# ಆಕ್ಸಿಜನ್ ಕೊರತೆ : 24 ಸಾವು

## ಚಾಮರಾಜನಗರದಲ್ಲಿ ಕೋವಿಡ್ ದುರಂತ

### ಸಾರಿಗೆ ವ್ಯವಸ್ಥಾಪಕ ನಿರ್ದೇಶಕರಿಂದ ತನಿಖೆಗೆ ಆದೇಶ

ಬೆಂಗಳೂರು, ಮೇ 3 – ಆಕ್ಸಿಜನ್ ಕೊರತೆಯಿಂದಾಗಿ ಚಾಮರಾಜನಗರದ ಆಸ್ಪತ್ರೆಯಲ್ಲಿ ಕೊರೊನಾದಿಂದ ಬಳಲುತ್ತಿದ್ದ 23 ಜನರೂ ಸೇರಿದಂತೆ 24 ಜನರು ಸಾವನ್ನಪ್ಪಿದ್ದಾರೆ. ಈ ಬಗ್ಗೆ ತನಿಖೆ ನಡೆಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲಿ ನಡೆದ ಘಟನೆ ತೀವ್ರ ಆಘಾತಕ್ಕೆ ಕಾರಣವಾಗಿದ್ದು, ಕುಟುಂಬದವರು ಸುದ್ದಿ ತಿಳಿದ ನಂತರ ಆಸ್ಪತ್ರೆ ಎದುರು ರೋಧಿಸುತ್ತಿದ್ದ ದೃಶ್ಯ ಮನಕಲಕುವಂತಿತ್ತು. ಪ್ರತಿಭಟನೆಯನ್ನೂ ನಡೆಸಿದ ಕುಟುಂಬದ ಸದಸ್ಯರು, ಆಕ್ಸಿಜನ್ ಕೊರತೆಯಿಂದ ಸಾವುಗಳು ಸಂಭವಿಸಿವೆ ಎಂದು ಆರೋಪಿಸಿದರು.

ಘಟನೆಯ ಬಗ್ಗೆ ತನಿಖೆ ನಡೆಸಲು ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಅವರನ್ನು ನೇಮಿಸಿರುವ ಮುಖ್ಯಮಂತ್ರಿ ಯಡಿಯೂರಪ್ಪ, ಮೂರು ದಿನಗಳಲ್ಲಿ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ. ಈ ಸಂಬಂಧ ನಾಳೆ ತುರ್ತು ಸಚಿವ ಸಂಪುಟ ಸಭೆಯನ್ನೂ ಕರೆದಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಆರೋಗ್ಯ ಸಚಿವ ಡಾ. ಸುಧಾಕರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಸುರೇಶ್ ಕುಮಾರ್, ಆಕ್ಸಿಜನ್ ಕೊರತೆಯಿಂದ ಸಾವುಗಳು ಎಲ್ಲೂ ಸಂಭವಿಸಿಲ್ಲ. ರೋಗಿಗಳು ಕೊನೆ ಗಳಿಗೆಯಲ್ಲಿ ಆಸ್ಪತ್ರೆಗೆ ಬರುತ್ತಿರುವುದರಿಂದ ಸಾವುಗಳು ಸಂಭವಿಸುತ್ತಿವೆ ಎಂದು ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ 6 ಸಾವಿರ ಲೀಟರ್ ದ್ರವ ವೈದ್ಯಕೀಯ ಆಕ್ಸಿಜನ್ ಇದೆ. ಆದರೆ, ಸಿಲಿಂಡರ್‌ಗಳ ಅಗತ್ಯವಿತ್ತು. ಮೈಸೂರಿನಿಂದ ಸಿಲಿಂಡರ್ ತರುವಲ್ಲಿ ಲೋಪವಾಗಿದೆ ಎಂದವರು ಹೇಳಿದ್ದಾರೆ.

ಮೂವರು ಮಾತ್ರ ಆಕ್ಸಿಜನ್ ಕೊರತೆಯಿಂದ ಸಾವನ್ನಪ್ಪಿದ್ದಾರೆ ಎಂದು ಹೇಳಿರುವ ಸಚಿವ ಸುಧಾಕರ್, ನಿನ್ನೆ ಭಾನುವಾರ ಬೆಳಗ್ಗೆ 7 ಗಂಟೆಯಿಂದ ಮಧ್ಯರಾತ್ರಿವರೆಗೆ 14 ಜನ ಸಾವನ್ನಪ್ಪಿದ್ದಾರೆ. ಇವರೆಲ್ಲರೂ ಕೊರೊನಾ ಸಹಜ ಕಾಯಿಲೆಯಿಂದ ಸಾವನ್ನಪ್ಪಿದ್ದಾರೆ. ಮಧ್ಯರಾತ್ರಿ (7ನೇ ಪುಟಕ್ಕೆ)


## ನಿರ್ದಾಕ್ಷಿಣ್ಯ ಕ್ರಮಕ್ಕೆ ಸಿಎಂ ಎಚ್ಚರಿಕೆ



ಬೆಂಗಳೂರು, ಮೇ 3 - ಚಾಮರಾಜನಗರ ಘಟನೆ ಕುರಿತಾಗಿ ಮೈಸೂರು ಜಿಲ್ಲಾಧಿಕಾರಿ ಮೇಲೆ ಕೆಂಡಕಾರಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಘಟನೆ ವರದಿ ಬಂದ ನಂತರ ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ಕೊಟ್ಟಿದ್ದಾರೆ.

24ಜನ ಆಕ್ಸಿಜನ್ ಕೊರತೆಯಿಂದ ಸಾವಿಗೀಡಾದ ಘಟನೆಯ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. (7ನೇ ಪುಟಕ್ಕೆ)

## ತನಿಖೆಗೆ ಬೊಮ್ಮಾಯಿ ಸೂಚನೆ



ಬೆಂಗಳೂರು, ಮೇ 3 - ಚಾಮರಾಜನಗರ ಆಸ್ಪತ್ರೆಯಲ್ಲಿ ರೋಗಿಗಳ ಸಾವಿನ ಪ್ರಕರಣ ಕುರಿತು ಸಮಗ್ರ ತನಿಖಾ ವರದಿ ನೀಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿರುವುದಾಗಿ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಮ್ಮಿಕೊಂಡಿದ್ದ ರಾಸಾಯನಿಕ ಸಿಂಪರಣೆ (2ನೇ ಪುಟಕ್ಕೆ)

## ಪರಿಸ್ಥಿತಿ ನಿಭಾಯಿಸಲು ಆಗದಿದ್ದರೆ ಅಧಿಕಾರ ಬಿಟ್ಟು ಹೋಗಿ : ಡಿಕೆಶಿ ತರಾಟೆ



ಬೆಂಗಳೂರು, ಮೇ 3 – ಚಾಮರಾಜನಗರದಲ್ಲಿ ಆಕ್ಸಿಜನ್ ಕೊರತೆಯಿಂದ 24 ಜನರ ಸಾವಿಗೆ ಹೊಣೆ ಯಾರು? ಎಂದು ಪ್ರಶ್ನಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ನಿಮ್ಮ ಕೈಯ್ಯಲ್ಲಿ ಪರಿಸ್ಥಿತಿ ನಿಭಾಯಿಸಲು ಆಗದಿದ್ದರೆ ಅಧಿಕಾರ ಬಿಟ್ಟು ಹೋಗಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಪ್ರಚಾರ ಪ್ರಿಯ ಸರ್ಕಾರ. ಈ ಸರ್ಕಾರ ಜನರ ನಂಬಿಕೆ ಕಳೆದುಕೊಂಡಿದೆ. ಆಕ್ಸಿಜನ್ ವಿಚಾರದಲ್ಲಿ ಯಾರೂ (7ನೇ ಪುಟಕ್ಕೆ)

## ಆಕ್ಸಿಜನ್ ಕೊರತೆಯ ಸಾವಲ್ಲ, ಕೊಲೆ : ನ್ಯಾಯಾಂಗ ತನಿಖೆಗೆ ಸಿದ್ದು ಆಗ್ರಹ



ಬೆಂಗಳೂರು, ಮೇ 3 - ಆಕ್ಸಿಜನ್ ಕೊರತೆಯಿಂದ ಚಾಮ ರಾಜನಗರ ಜಿಲ್ಲಾ ಆಸ್ಪತ್ರೆಗೆಯಲ್ಲಿ 24 ಮಂದಿ ಸಾವಿಗೀಡಾಗಿರುವ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ತಮ್ಮ ನಿವಾಸದಲ್ಲಿಂದು ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಘಟನೆಗೆ ಕಾರಣರಾದ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಬೇಕು, ಮೃತರ ಕುಟುಂಬದವರಿಗೆ ತಲಾ (2ನೇ ಪುಟಕ್ಕೆ)

## ಆಕ್ಸಿಜನ್ ಎಕ್ಸ್‌ಪ್ರೆಸ್‌ಗಾಗಿ ರೈಲ್ವೆಗೆ ರಾಜ್ಯದ ಪತ್ರ

ಬೆಂಗಳೂರು, ಮೇ 3 - ರಾಜ್ಯದಲ್ಲಿನ ಕೋವಿಡ್ ಕೇರ್ ಸೆಂಟರ್‌ಗಳು ಮತ್ತು ಆಸ್ಪತ್ರೆಗಳಲ್ಲಿನ ಸಮರ್ಪಕ ವೈದ್ಯಕೀಯ ಆಕ್ಸಿಜನ್ ಕೊರತೆ ನಿಭಾಯಿಸಲು ರಾಜ್ಯಕ್ಕೆ ಆಕ್ಸಿಜನ್ ಎಕ್ಸ್ ಪ್ರೆಸ್ ರೈಲುಗಳನ್ನು ಓಡಿಸಲು ಆದ್ಯತೆ ನೀಡಬೇಕೆಂದು ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ರೈಲ್ವೆ ಮಂಡಳಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರಿನಲ್ಲಿ ವೈಟ್ ಫೀಲ್ಡ್ ಅಥವಾ ದೊಡ್ಡಬಳ್ಳಾಪುರ ರೈಲು ನಿಲ್ದಾಣದ ನಡುವೆ ಮತ್ತು ಒಡಿಶಾದಲ್ಲಿ ಕಾಳಿಂಗ ನಗರ ಅಥವಾ ಆಂಗುಲ್ ನಿಲ್ದಾಣ, ಆಂಧ್ರಪ್ರದೇಶದ ವಿಶಾಖಪಟ್ಟಣ ನಡುವೆ ಅನಿಲ ಟ್ಯಾಂಕರ್ (7ನೇ ಪುಟಕ್ಕೆ)

## ಪೋಷಕರನ್ನು ಕಳೆದುಕೊಂಡವರಿಗೆ ತಕ್ಷಣದ ಅಗತ್ಯ ಮೂಲ ಸೌಕರ್ಯ

ಬೆಂಗಳೂರು, ಮೇ 3 – ಕೊರೊನಾ ಸೋಂಕಿನಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ತಕ್ಷಣದ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಸರ್ಕಾರ ಮುಂದಾಗಿದೆ.

ಮಕ್ಕಳಿಗೆ ಅಗತ್ಯ ಸೌಕರ್ಯಗಳನ್ನು ಒದಗಿಸಲು ಐಎಎಸ್ ಅಧಿಕಾರಿ ಕೆ.ಪಿ. ಮೋಹ ನ್‌ರಾಜ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ. ಪೋಷಕರನ್ನು ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಸರ್ಕಾರದಿಂದ ಅತ್ಯಾವಶ್ಯಕ ಸೌಕರ್ಯಗಳನ್ನು ಆದ್ಯತೆ ಮೇರೆಗೆ ಒದಗಿಸಲು ಪೂರ್ಣ ಅಧಿಕಾರವನ್ನು ಅಧಿಕಾರಿಗೆ ನೀಡಲಾಗಿದೆ.

## ನೀಟ್ - ಪಿಜಿ ಪರೀಕ್ಷೆ ಮುಂದೂಡಿಕೆ

ನವದೆಹಲಿ, ಮೇ 3 – ಕೊರೊನಾ ವಿರುದ್ಧ ಹೋರಾಡಲು ಮಾನವ ಸಂಪನ್ಮೂಲ ಹೆಚ್ಚಿಸಲು ಮುಂದಾಗಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ನೀಟ್ - ಪಿಜಿ ಪರೀಕ್ಷೆಯನ್ನು ನಾಲ್ಕು ತಿಂಗಳ ಕಾಲ ಮುಂದೂಡುವ ನಿರ್ಧಾರ ತೆಗೆದುಕೊಂಡಿದ್ದಾರೆ. ಇದರಿಂದಾಗಿ ಕೊರೊನಾ ಸಮಯದಲ್ಲಿ ಕರ್ತವ್ಯಕ್ಕೆ ದೊಡ್ಡ ಪ್ರಮಾಣದ ಅರ್ಹ ವೈದ್ಯರು ಸಿಗಲಿದ್ದು, ಅವರು ಇಂಟರ್ನ್‌ಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ.

> **ವಿದ್ಯಾರ್ಥಿಗಳನ್ನು ಕೊರೊನಾ ಸೇವೆಗೆ ಬಳಸಿಕೊಳ್ಳಲು ನಿರ್ಧಾರ**

ನೂರು ದಿನಗಳ ಕಾಲ ಕೊರೊನಾ ಚಿಕಿತ್ಸೆಯಲ್ಲಿ ತೊಡಗುವ ಎಲ್ಲಾ ವೃತ್ತಿ ರರಿಗೆ ಮುಂಬರುವ ಸರ್ಕಾರಿ ನೇಮಕಾತಿಗಳಲ್ಲಿ ಆದ್ಯತೆ ನೀಡಲಾಗುವುದು ಹಾಗೂ ಪ್ರಧಾನ ಮಂತ್ರಿ ರಾಷ್ಟ್ರೀಯ ಸೇವಾ ಸಮ್ಮಾನ ಪುರಸ್ಕಾರವನ್ನೂ ನೀಡಲಾಗುವುದು.

ಅಂತಿಮ ವರ್ಷದ ಎಂ.ಬಿ.ಬಿ. ಎಸ್. ವಿದ್ಯಾರ್ಥಿಗಳು ದೂರವಾಣಿ ಮೂಲಕ ಸಮಾಲೋಚನೆ ಹಾಗೂ ಲಘು ಕೊರೊನಾ ಪ್ರಕರಣಗಳ ನಿರ್ವ ಹಣೆಯಂತಹ ಕಾರ್ಯಗಳನ್ನೂ ನಿರ್ವ ಹಿಸಬಹುದಾಗಿದೆ. (7ನೇ ಪುಟಕ್ಕೆ)

## ಕೇಂದ್ರೀಯ ಸಂಸ್ಥೆಗಳ ಆಫ್‌ಲೈನ್ ಪರೀಕ್ಷೆಗಳು ಮುಂದೂಡಿಕೆ

ನವದೆಹಲಿ,ಮೇ 3-ಕೇಂದ್ರದಿಂದ ಅನುದಾನ ಪಡೆಯುವ ಎಲ್ಲ ಸಂಸ್ಥೆಗಳು ಮೇ ತಿಂಗಳಲ್ಲಿ ನಡೆಯಬೇಕಿರುವ ಆಫ್‌ಲೈನ್ ಪರೀಕ್ಷೆ ಗಳನ್ನು ಮುಂದೂಡಬೇಕೆಂದು ಕೇಂದ್ರ ಶಿಕ್ಷಣ ಸಚಿವಾ ಲಯ ತಿಳಿಸಿದೆ. ಕೊರೊನಾ ಹಿನ್ನೆಲೆಯಲ್ಲಿ ತೆಗೆದುಕೊಂಡ ಈ ನಿರ್ಧಾರ ದಿಂದ ಐಐಟಿ, ಎನ್.ಐ.ಟಿ., ಐಐಐಟಿ ಹಾಗೂ ಕೇಂದ್ರೀಯ ವಿಶ್ವವಿ ದ್ಯಾನಿಲಯಗಳೂ ಸೇರಿದಂತೆ ಹಲವಾರು ಸಂಸ್ಥೆಗಳ ಪರೀಕ್ಷೆಗಳು ಮುಂದೂಡಿಕೆಯಾಗಲಿವೆ. ಆದರೆ, ಆನ್‌ಲೈನ್ ಪರೀಕ್ಷೆ ಅನುಮತಿಯಿದೆ.

## ಕೇಂದ್ರದ ನೀತಿ ಮರು ಪರಿಶೀಲನೆಗೆ ಸುಪ್ರೀಂ ಸೂಚನೆ

> **18 ವರ್ಷ ದವರಿಗೆ ಲಸಿಕೆ**

ನವದೆಹಲಿ, ಮೇ 3 – ಕೇಂದ್ರ ಸರ್ಕಾರ 18ರಿಂದ 44 ವರ್ಷದವರಿಗೆ ಲಸಿಕೆ ನೀಡಲು ರೂಪಿಸಿರುವ ನೀತಿಯನ್ನು ಮರು ಪರಿಶೀಲಿಸಬೇಕು. ಈ ನೀತಿ ಸಾರ್ವಜನಿಕ ಆರೋಗ್ಯ ಹಾಗೂ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿರುವುದು ಮೇಲ್ನೋಟಕ್ಕೆ (2ನೇ ಪುಟಕ್ಕೆ)

## ಖಾಸಗಿ ಆಸ್ಪತ್ರೆಗಳ ಶೇ.50 ಹಾಸಿಗೆಗಳು ಸೋಂಕಿತರಿಗೆ

ದಾವಣಗೆರೆ,ಮೇ 3-ಖಾಸಗಿ ಆಸ್ಪತ್ರೆಗಳಲ್ಲಿನ ಶೇ.50 ರಷ್ಟು ಹಾಸಿಗೆಗಳನ್ನು ಕೊರೊನಾ ಸೋಂಕಿ ತರ ಚಿಕಿತ್ಸೆಗಾಗಿ ಕಾಯ್ದಿರಿಸಲು ರಾಜ್ಯ ಸರ್ಕಾರ ನೀಡಿದ ನಿರ್ದೇಶನ ದಂತೆ ಕ್ರಮ ತೆಗೆದುಕೊಂಡ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ವರದಿ ಕಳಿಸಿದ್ದಾರೆ.

ಆರೋಗ್ಯ ಇಲಾಖೆ ಆಯುಕ್ತ ರಿಗೆ ಈ ಬಗ್ಗೆ ಪತ್ರ ಬರೆಯಲಾಗಿದ್ದು, ನಗರದ ಏಳು ಖಾಸಗಿ ಆಸ್ಪತ್ರೆಗಳಲ್ಲಿ ಬೆಡ್‌ಗಳನ್ನು ಕಾಯ್ದಿರಿಸಿರುವ ಬಗ್ಗೆ ತಿಳಿಸಿದೆ. ಈ ಆಸ್ಪತ್ರೆಗಳು ಸ್ವಾಗತ ಮೇಜಿನ ಬಳಿಯೇ ಹಾಸಿಗೆ ಹಂಚಿಕೆ ವಿವರ ಪ್ರದರ್ಶಿಸುವಂತೆ ತಿಳಿಸಲಾಗಿದೆ.

ಬಾಪೂಜಿ ಆಸ್ಪತ್ರೆ, ಎಸ್. ಎಸ್.ಐ.ಎಂ.ಎಸ್., ಸಿಟಿ. ಸೆಂಟ್ರಲ್ ಆಸ್ಪತ್ರೆ, ಆರೈಕೆ ಆಸ್ಪತ್ರೆ, ಸುಕ್ಷಮ ಆಸ್ಪತ್ರೆ, ಆಶ್ರಯ ಆಸ್ಪತ್ರೆ ಹಾಗೂ ಸಂಜೀವಿನಿ ಆಸ್ಪತ್ರೆಗಳು ಈ ವ್ಯಾಪ್ತಿಗೆ ಬರಲಿವೆ.

## ಜಿಲ್ಲೆಯಲ್ಲಿ 104 ಕೊರೊನಾ ಸೋಂಕು, ಮೂರು ಸಾವು

ದಾವಣಗೆರೆ, ಮೇ 3 – ಜಿಲ್ಲೆಯಲ್ಲಿ ಸೋಮವಾರ 104 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಮೂವರು ಸಾವನ್ನಪ್ಪಿದ್ದಾರೆ.

ಹರಿಹರದ ಜೆ.ಸಿ. ಬಡಾವಣೆಯ 28 ವರ್ಷ, ಗುತ್ತೂರು ಕಾಲೋನಿಯ 55 ವರ್ಷದ ಪುರುಷ ಮತ್ತು ದಾವಣಗೆರೆಯ ಪಿ.ಜೆ ಬಡಾವಣೆಯ 64 ವರ್ಷದ ವ್ಯಕ್ತಿ ಕೊರೊನಾದಿಂದ ಸಾವನ್ನಪ್ಪಿದ್ದಾರೆ.

ಇದೇ ದಿನ 224 ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ ಎಂದು ಜಿಲ್ಲಾಡಳಿತದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಲಸಿಕಾ ಕೇಂದ್ರ ಮೋತಿ ವೀರಪ್ಪದಿಂದ ಜಿಲ್ಲಾಸ್ಪತ್ರೆಗೆ

> **ಲಸಿಕೆಗೆ ಆನ್‌ಲೈನ್ ನೋಂದಣಿ ಕಡ್ಡಾಯ**

ದಾವಣಗೆರೆ, ಮೇ 3 – ನಗರದ ಮೋತಿ ವೀರಪ್ಪ ಕಾಲೇಜಿನಲ್ಲಿ ನಡೆಸಲಾಗುತ್ತಿದ್ದ ಕೊರೊನಾ ಲಸಿಕೆಯನ್ನು ಇನ್ನು ಮುಂದೆ ಚಿಗಟೇರಿ ಜಿಲ್ಲಾ ಆಸ್ಪತ್ರೆ ಯಲ್ಲಿರುವ (2ನೇ ಪುಟಕ್ಕೆ)

## ಲಾಕ್‌ಡೌನ್‌ನಲ್ಲೂ ಕೈ ಹಿಡಿದ 'ಉದ್ಯೋಗ ಖಾತ್ರಿ ಯೋಜನೆ'

**ಬಿ.ಪಿ.ಸುಭಾನ್**

ಬಿರುಬೇಸಿಗೆ ಹಾಗೂ ಲಾಕ್‌ಡೌನ್ ನಿಂದ ಯಾವುದೇ ಕೆಲಸವಿಲ್ಲದೆ ತೊಂದರೆಯಲ್ಲಿದ್ದ ಗ್ರಾಮೀಣ ಕೃಷಿ ಕಾರ್ಮಿಕರಿಗೆ ಹಾಗೂ ಸಣ್ಣ ರೈತಾಪಿ ಜನರಿಗೆ ತಾಲ್ಲೂಕಿನ ಕೃಷಿ ಇಲಾಖೆ ಕೈಗೊಂಡಿರುವ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕೈಹಿಡಿದಿದೆ.

ಕೃಷಿ ಇಲಾಖೆವತಿಯಿಂದ ತಾಲ್ಲೂಕಿನ ಹಲವು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅಂತರ್ಜಲ ಅಭಿವೃದ್ಧಿಗೆ ಕಂದಕ, ಬದು ನಿರ್ಮಾಣ, ಮಳೆ ನೀರು ಸಂಗ್ರಹಣೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕಾಮಗಾರಿಗಳು ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಿದರೆ, ರೈತರಿಗೆ ಅಂತರ್ಜಲ ಅಭಿವೃದ್ಧಿಗೆ ನೆರವಾಗಿದೆ.

ಲಾಕ್‌ಡೌನ್ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಯಾವುದೇ ಕೆಲಸಗಳು ಇರುವುದಿಲ್ಲ. ಅಲ್ಲದೆ ಕೆಲಸ ಅರಸಿ ಹೋಗಿದ್ದ ಕೆಲವರು ಪುನಃ ಗ್ರಾಮಕ್ಕೆ ಹಿಂದಿರುಗಿದ್ದಾರೆ. ಅವರು ಸಹ ಕೆಲಸವಿಲ್ಲದೆ ಪರಿತಪಿಸುವ ಪರಿಸ್ಥಿತಿ ಉಂಟಾಗಿದೆ. ಕಳೆದ ವರ್ಷವೂ ಸಹ ಕೊರೊನಾ ಹಿನ್ನೆಲೆಯಲ್ಲಿ ಉಂಟಾಗಿದ್ದ ಲಾಕ್‌ಡೌನ್ ಸಂದರ್ಭದಲ್ಲಿ ಗ್ರಾಮೀಣ ಕಾರ್ಮಿಕರು, ಕೃಷಿಕರು, ವ್ಯಾಪಾರಸ್ಥರು ತೀವ್ರ ತೊಂದರೆಗೆ ಒಳಗಾಗಿದ್ದನ್ನು ಮರೆಯುವಂತಿಲ್ಲ.



ಕೃಷಿ ಇಲಾಖೆಯಿಂದ ರೈತರ ಹೊಲದಲ್ಲಿ ಅಂತರ್ಜಲ ಅಭಿವೃದ್ಧಿ ಕಾಮಗಾರಿ

ಪ್ರಸಕ್ತ ವರ್ಷವೂ ಸಹ ಕೊರೊನಾ ಕಾರಣದಿಂದಾಗಿ ಪುನಃ ಲಾಕ್‌ಡೌನ್ ಉಂಟಾಗಿದ್ದು ಮತ್ತೆ ಕಾರ್ಮಿಕರು, ಭೂರಹಿತ ಕೃಷಿ ಕಾರ್ಮಿಕರು, ಬಡಜನರು ಉದ್ಯೋಗವಿಲ್ಲದೆ ಪರಿತಪಿಸುವ ಪರಿಸ್ಥಿತಿ ಉಂಟಾಗಿದೆ.

ಬಹುನಿರೀಕ್ಷಿತ ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ತಾಲ್ಲೂಕಿನ ಕೃಷಿ ಇಲಾಖೆ ಕೈಗೊಂಡಿರುವ ಅಂತರ್ಜಲ ಅಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳು ಕೂಲಿ ಕಾರ್ಮಿಕರ ಬದುಕಿಗೆ ನೆರವಾಗಿದೆ.

> **ಗ್ರಾಮೀಣ ಭಾಗದ ನಿರುದ್ಯೋಗಿ ಜನರಿಗೆ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಕಲ್ಪಿಸಲಾಗುತ್ತಿದೆ, ಈ ಸಂಕಷ್ಟಮಯ ಸಂದರ್ಭದಲ್ಲಿ, ಕೊರೊನಾ ಅಟ್ಟಹಾಸದ ಮಧ್ಯೆ ಜೀವನ ನಡೆಸಲು ಈ ಯೋಜನೆ ವರದಾನವಾಗಿದೆ. ಬಡ ಕುಟುಂಬಗಳು ಆರ್ಥಿಕ ಪುನಶ್ಚೇತನ ಹೊಂದಲು ಸಾಧ್ಯವಾಗುತ್ತಿದೆ.**

ಕೃಷಿ ಇಲಾಖೆಯಿಂದ ಜಾರಿಯಲ್ಲಿದ್ದ ಜಲಾಮೃತ ಯೋಜನೆಯ ಮಾದರಿಯಲ್ಲಿಯೇ, ರೈತರ ಹೊಲದಲ್ಲಿ ಕಂದಕ, ಬದು ನಿರ್ಮಾಣ, ಮಳೆ ನೀರು ಸಂಗ್ರಹ, ನೀರು ಹರಿಯುವುದನ್ನು ತಡೆಹಿಡಿಯುವುದು, ಮಣ್ಣಿನ ಸವಕಳಿ ತಪ್ಪಿಸುವುದು, ಇಂಗು ಗುಂಡಿಗಳನ್ನು ನಿರ್ಮಿಸಿ ಅಂತರ್‌ಜಲ ಹೆಚ್ಚಿಸುವ ಕಾಮಗಾರಿಗಳು ಕಾರ್ಮಿಕರಿಗೆ ಉದ್ಯೋಗ ಕಲ್ಪಿಸಿಕೊಟ್ಟಿವೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಉದ್ಯೋಗ ಚೀಟಿ ಹೊಂದಿರುವ ಕಾರ್ಮಿಕರು, ರೈತರು ಸ್ವಯಂ ಸ್ಫೂರ್ತಿಯಿಂದ ಕೆಲಸದಲ್ಲಿ (7ನೇ ಪುಟಕ್ಕೆ)

## ಜಜಮು ವೈದ್ಯಕೀಯ ಕಾಲೇಜಿಗೆ ದಾಖಲೆಯ ಫಲಿತಾಂಶ



ಎಸ್.ಪಿ.ಶ್ರೇಯ

ದಾವಣಗೆರೆ, ಮೇ 3 - ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಈಚೆಗೆ ನಡೆಸಿದ ಕರ್ನಾಟಕದ ಪರೀಕ್ಷೆಯಲ್ಲಿ ನಗರದ ಜ.ಜ.ಮು ವೈದ್ಯಕೀಯ ಮಹಾವಿದ್ಯಾಲಯವು ದಾಖಲೆಯ ಫಲಿತಾಂಶ ಪಡೆದಿದೆ. ತನ್ನ 55 ವರ್ಷಗಳ ಇತಿಹಾಸದಲ್ಲೇ ಅತಿ ಹೆಚ್ಚು ಶೇಕಡ ತೇರ್ಗಡೆಯ ದಾಖಲೆ ಬರೆದಿದೆ.

ಪರೀಕ್ಷೆಯಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು, ದ್ವಿತೀಯ ವರ್ಷದಲ್ಲಿ 30 ವಿದ್ಯಾರ್ಥಿಗಳು, ತೃತೀಯ ವರ್ಷದಲ್ಲಿ 16 ವಿದ್ಯಾರ್ಥಿಗಳು ಹಾಗೂ ಅಂತಿಮ ವರ್ಷದಲ್ಲಿ (7ನೇ ಪುಟಕ್ಕೆ)

## ದಾವಣಗೆರೆ ಅರ್ಬನ್ ಬ್ಯಾಂಕ್ ನಿರ್ವಹಣಾ ಮಂಡಳಿಗೆ ಟಿ.ಎಸ್.ಜಯರುದ್ರೇಶ್ ಅಧ್ಯಕ್ಷ



ದಾವಣಗೆರೆ,ಮೇ 3- ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನೂತನವಾಗಿ 'ನಿರ್ವಹಣಾ ಮಂಡಳಿ (ಬಿಓಎಂ)' ಯನ್ನು ರಚಿಸಲಾಗಿದ್ದು, ಈ ಮಂಡ ಳಿಯ ಅಧ್ಯಕ್ಷರಾಗಿ ಬ್ಯಾಂಕಿನ ಹಿರಿಯ ನಿರ್ದೇಶಕರ ಲ್ಲೊಬ್ಬರಾದ ಟಿ.ಎಸ್. ಜಯರುದ್ರೇಶ್ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ನಿರ್ದೇಶಕರುಗಳಾದ ದೇವರಮನೆ ಶಿವಕುಮಾರ್, ಕಂಚಿಕೆರೆ ಮಹೇಶ್ ಅವರುಗಳಲ್ಲದೇ, ಹಿರಿಯ ಲೆಕ್ಕ ಪರಿಶೋಧಕರುಗಳಾದ ಬೆಳಗಾವಿ ಬಸವರಾಜಪ್ಪ, ಜಂಬಗಿ ರಾಧೇಶ್, ಸಾಫ್ಟ್ ವೇರ್ ಇಂಜಿನಿಯರ್ ಕೆ.ಕೊಟ್ರೇಶ್ ಅವರುಗಳು ಈ ಮಂಡಳಿಯ ಸದಸ್ಯರುಗಳಾಗಿದ್ದಾರೆ.

ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಕೋಗುಂಡಿ (8ನೇ ಪುಟಕ್ಕೆ)

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಎಂ.ಬಿ. ಸಿಟಿಯಲ್ಲಿ ಸೈಟ್ ಮಾರಾಟಕ್ಕಿವೆ**
ಪೂರ್ವ : 30x40, 40x60 ಸೈಟು
ಶಿವಪಾರ್ವತಿಯಲ್ಲಿ ಪೂರ್ವ-ಪಶ್ಚಿಮ : 30x40, ಪೂರ್ವ : 40x60 , 30x50
ಸುರೇಶ್ : 95911 60520
ಐಗೂರು ವಿಜಯಕುಮಾರ್ : 99457 02495

**ಸೈಟ್‌ಗಳು ಮಾರಾಟಕ್ಕಿವೆ**
ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ, ಹೊಸ ಬನಶಂಕರಿ ಲೇಔಟ್‌ನಲ್ಲಿ 30x48 East,30x50 West, 60x40 West 40 ಅಡಿ ರೋಡಿಗಿದೆ, 40x72 ಪೂರ್ವಕ್ಕೆ ರೋಡ್, ಪಶ್ಚಿಮಕ್ಕೆ ರೋಡ್, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಮನೆ ಮಾರಾಟಕ್ಕಿವೆ**
SS ಎ ಬ್ಲಾಕ್, ಅಥಣಿ ಕಾಲೇಜ್ ರಸ್ತೆ, ಪೂರ್ವ : 30x46 ಡ್ಯೂಪ್ಲೆಕ್ಸ್
SS ಬಿ ಬ್ಲಾಕ್, 30x40 ಪೂರ್ವ : ಡ್ಯೂಪ್ಲೆಕ್ಸ್, ಮತ್ತು ಮೇಲೆ-ಕೆಳಗೆ ಮನೆ,
ಬಸವೇಶ್ವರ ಲೇಔಟ್, 30x45, ಪಶ್ಚಿಮ : 30x40,
ಸುರೇಶ್ : 95911 60520
ಐಗೂರು ವಿಜಯಕುಮಾರ್ : 99457 02495

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್.ಎಂ. ಎನ್‌ಕ್ಲೇವ್‌ನಲ್ಲಿ ಗ್ಲಾಸ್ ಹೌಸ್ ಹತ್ತಿರ
30x50 East, 60x50 East, 40x75 East, 30x50, 30x50 East ಅಕ್ಕ-ಪಕ್ಕ, 30x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110
93410 14130

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ಶ್ರೀ ಡಿ.ಟಿ.ಎನ್. ನಾರಾಯಣಸ್ವಾಮಿ ಮತ್ತು ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ಶುದ್ಧ ಕೊಬ್ಬರಿ, ಕುಸುಬಿ, ಶೇಂಗಾ ಎಣ್ಣೆಯಿಂದ ತಯಾರಿಸಿದ ಸಿರಿಧಾನ್ಯದ ಸ್ಪೆಷಲ್ ಖಾರ, ಬೆಳ್ಳುಳ್ಳಿ ಖಾರ, ರಾಗಿ ಖಾರ ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ. ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**Online Tutions**
From 6th to 10th Std
Bruit abacus and vedics maths
97390 66956

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ತಯಾರಿಸಿದ ಸಿರಿಧಾನ್ಯದ, ದ್ವಿದಳ ಧಾನ್ಯದ ಸ್ಪೆಷಲ್ ಮಾಲ್ಟ್, ಸಿರಿಧಾನ್ಯದ ಚಪಾತಿ ಹಿಟ್ಟು, ಸಿರಿಧಾನ್ಯದ ರೊಟ್ಟಿ ಹಿಟ್ಟು ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಜಮೀನು ಮಾರಾಟಕ್ಕಿದೆ**
ಹರಿಹರ, ದೇವರ ಬೆಳಕೆರೆ, ಬಾತಿ, ಕೊಂಡಜ್ಜಿ.
74112 50447

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
# 187, 'ಡಿ' ಬ್ಲಾಕ್, ನಾಗನೂರು ಮೇನ್ ರೋಡ್, ಜೆ.ಹೆಚ್. ಪಟೇಲ್ ನಗರ, ದಾವಣಗೆರೆಯಲ್ಲಿ ನೂತನವಾಗಿ ನಿರ್ಮಿಸಿರುವ ಮನೆ, ಮುನ್ಸಿಪಲ್/ಬೋರ್ ನೀರಿನ, ಸೋಲಾರ್ ವ್ಯವಸ್ಥೆ ಇರುವ 1 BHK ಮನೆ ಬಾಡಿಗೆ/ಲೀಸ್‌ಗೆ ಇದೆ.
8296746293, 99452 15240

**ಮನೆ ಬಾಡಿಗೆಗಿದೆ**
3BHK East Facing, ಗ್ರೌಂಡ್ ಫ್ಲೋರ್ 10 ನೇ ಕ್ರಾಸ್ ಎಂ.ಸಿ.ಸಿ 'ಎ' ಬ್ಲಾಕ್
ಮೊ: 98444 06587

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಬೇಕಾಗಿದ್ದಾರೆ**
ನೆಟ್‌ವರ್ಕ್ ಮಾರ್ಕೆಂಟಿಗ್ ನಲ್ಲಿ ಕೆಲಸ ಮಾಡಲು 2 ರಿಂದ 5 ವರ್ಷ ಅನುಭವವುಳ್ಳ ಹಾಗು ಟೀಮ್ ಡೆವಲಪ್‌ಮೆಂಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
8711004905

**WANTED**
Tally Experience with 2-3 years Boys only
S.K. Trading Company
Chowkipete, Davangere.
Exclusive Salary
89041 33227

**ಶ್ರೀ ಅಣೆಗೆರೆಕಟ್ಟೆ ಜ್ಯೋತಿಷ್ಯ ಫಲ**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ವಶೀಕರಣ, ಮನ:ಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ :
9980770791, 9606818273

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


# 6 ತಿಂಗಳೊಳಗೆ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ

## ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ವಿಶ್ವಾಸ

ಮಲೇಬೆನ್ನೂರು, ಮೇ 3- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸುವ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು 6 ತಿಂಗಳು ಸಮಯ ತೆಗೆದುಕೊಂಡಿದ್ದಾರೆ. ಅಷ್ಟರೊಳಗೆ ನಮಗೆ ನ್ಯಾಯ ಒದಗಿಸುತ್ತಾರೆಂಬ ನಂಬಿಕೆ ಇದೆ ಎಂದು ಕೂಡಲಸಂಗಮದ ಪಂಚಮಸಾಲಿ ಗುರುಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಅವರು ಸೋಮವಾರ ಸಂಜೆ ಮಲೇಬೆನ್ನೂರು ಪಟ್ಟಣದ ಹೊರವಲಯದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ದೇವಸ್ಥಾನದ ಸಂಕೀರ್ಣವನ್ನು ವೀಕ್ಷಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

ಪಾದಯಾತ್ರೆಯ ಸಮಾರೋಪಕ್ಕೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ್ದ ಸುಮಾರು 10 ಲಕ್ಷ ಜನರಿಗೆ ದಾಸೋಹ ವ್ಯವಸ್ಥೆ ಮಾಡಿದ ಕೀರ್ತಿ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಬಿ.ಚಿದಾನಂದಪ್ಪ, ಮಾಜಿ ಮೇಯರ್ ಬಿ.ಜಿ.ಅಜಯ್‌ಕುಮಾರ್ ಅವರಿಗೆ ಸಲ್ಲುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪಾದಯಾತ್ರೆಗೆ ಹರಿಹರ, ದಾವಣಗೆರೆಯಲ್ಲಿ ಸಿಕ್ಕ ಅಭೂತಪೂರ್ವ ಬೆಂಬಲದಿಂದಾಗಿ ನಮ್ಮ ಹೋರಾಟಕ್ಕೆ ಹೊಸ ತಿರುವು ಸಿಕ್ಕಿತು. ಪಂಚಮಸಾಲಿ ಸಮಾಜಕ್ಕೆ ಸಿಗಬೇಕಾದ ನ್ಯಾಯಬದ್ಧ ಹಕ್ಕುಗಳಿಗಾಗಿ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಸ್ವಾಮೀಜಿ ಹೇಳಿದರು.

ಮಲೇಬೆನ್ನೂರು ಹೊರವಲಯದಲ್ಲಿ ಇಂತಹ ಅದ್ಭುತ ದೇವಾಲಯವನ್ನು ನಿರ್ಮಿಸುವ ಮೂಲಕ ಬೆನಕನಕೊಂಡಿ ಮನೆತನದವರು ಇಂದಿನ ಯುವ ಜನಾಂಗಕ್ಕೆ ಇತಿಹಾಸ, ಕಲೆ, ಸಾಹಿತ್ಯವನ್ನು ಪರಿಚಯಿಸುವ ಕೆಲಸ ಮಾಡಿದ್ದಾರೆ.



ಮಲೇಬೆನ್ನೂರಿನ ವೀರಭದ್ರೇಶ್ವರ ದೇವಸ್ಥಾನ ಜಿಲ್ಲೆಗೇ ಮಾದರಿ : ಮೆಚ್ಚುಗೆ

21ನೇ ಶತಮಾನದಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿರುವ ದೇವಸ್ಥಾನದ ಶಿಲ್ಪ ಕಲೆ ಎಲ್ಲರನ್ನೂ ಆಕರ್ಷಿಸುವಂತಿದೆ. ದಾವಣಗೆರೆ ಜಿಲ್ಲೆಯಲ್ಲಿರುವ ಪ್ರಸಿದ್ಧ ಸಂತೇಬೆನ್ನೂರು ಪುಷ್ಕರಣಿ, ಹರಿಹರೇಶ್ವರ ದೇವಸ್ಥಾನ, ಬಾಗಳಿ ದೇವಸ್ಥಾನಗಳಂತೆ ಈ ದೇವಸ್ಥಾನವು ಪ್ರವಾಸಿಗರನ್ನು, ಭಕ್ತರನ್ನು ಕೈ ಬೀಸಿ ಕರೆಯುವಂತಿದೆ.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಹರಿಹರ ಸಂಗಮ ಕ್ಷೇತ್ರವಾಗಿ ಹೊರಹೊಮ್ಮಿದೆ. ಇಲ್ಲಿ ಐತಿಹಾಸಿಕ ಹರಿಹರೇಶ್ವರ ದೇವಸ್ಥಾನ ಇದೆ. ಪ್ರಸಿದ್ಧ ಚರ್ಚ್, ದರ್ಗಾಗಳಿವೆ. ಪ್ರಬಲ ಗುರುಪೀಠಗಳಿವೆ. ಈ ಪಟ್ಟಿಯಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಸೇರ್ಪಡೆಗೊಳ್ಳುತ್ತಿರುವುದು ಹರಿಹರ ತಾಲ್ಲೂಕಿನ ಜನರ ಪುಣ್ಯ ಎಂದರು.

ದೇವಸ್ಥಾನ ಟ್ರಸ್ಟ್ ಕಮಿಟಿಯ ನಿರ್ದೇಶಕರೂ ಆದ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ ಮಾತನಾಡಿ, ಈ ನೂತನ ದೇವಸ್ಥಾನದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಶ್ರೀ ವೀರಭದ್ರೇಶ್ವರ, ಶ್ರೀ ಮಹಾಗಣಪತಿ, ಶ್ರೀ ಕಾಲ ಭೈರವ, ಶ್ರೀ ನಾಗದೇವತೆ ಪರಿವಾರ ಶಿಲಾಮೂರ್ತಿಗಳಿಗೆ ಕಳೆದ ತಿಂಗಳ 15 ರಿಂದಲೂ ವಿವಿಧ ಪೂಜೆಗಳು ನಡೆಯುತ್ತಿವೆ. ಇದೇ ತಿಂಗಳು 14 ರಂದು ಶ್ರೀ ರಂಭಾಪುರಿ ಜಗದ್ಗುರುಗಳವರಿಂದ ಈ ದೇವಸ್ಥಾನದ ಲೋಕಾರ್ಪಣೆ ಕಾರ್ಯಕ್ರಮವನ್ನು ಸರಳವಾಗಿ ಹಮ್ಮಿಕೊಂಡಿದ್ದೇವೆ. ಅಂದೇ ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮವೂ ನೆರವೇರಲಿದೆ ಎಂದು ಚಿದಾನಂದಪ್ಪ ತಿಳಿಸಿದರು.

ದೇವಸ್ಥಾನದ ಉಪಾಧ್ಯಕ್ಷ ಬಿ.ನಾಗೇಂದ್ರಪ್ಪ, ಬಿ. ಉಮಾಪತಿ, ಎಸ್.ಎನ್.ಶಂಭುಲಿಂಗಪ್ಪ, ಪಂಚಮಸಾಲಿ ಸಮಾಜದ ಅಧ್ಯಕ್ಷ ಗೋಪನಾಳ್ ಅಶೋಕ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ರೈತ ಸಂಘದ ನಂದಿತಾವರೆ ಶಂಭುಲಿಂಗಪ್ಪ, ಹರಪನಹಳ್ಳಿ ಸಿದ್ಲಿಂಗಪ್ಪ, ಸಿ.ಎಂ.ಗುಡ್ಡಪ್ಪ, ಬಿ.ಎನ್.ನಾಗರಾಜ್, ಶಿವಶಂಕರ್ ಮೇಷ್ಟ್ರು, ಹೊಸಳ್ಳಿ ಹಾಲೇಶಪ್ಪ, ಹೆಚ್.ಎಲ್. ಬಸವರಾಜ್, ಪರಮೇಶ್ವರಪ್ಪ, ಹೊಸಳ್ಳಿ ಕರಿಬಸಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

## ಜಿಲ್ಲಾಸ್ಪತ್ರೆಗೆ

**(1ನೇ ಪುಟದಿಂದ)** ಮಕ್ಕಳ ಮತ್ತು ಹೆರಿಗೆ ಆಸ್ಪತ್ರೆಯ ಕೊಠಡಿ ಸಂಖ್ಯೆ 34ರಲ್ಲಿ ನೀಡಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜಿಲ್ಲಾದ್ಯಂತದ ಪ್ರತಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ ಕೇಂದ್ರಗಳು ಹಾಗೂ ದಾವಣಗೆರೆಯ ಚಾಮರಾಜಪೇಟೆಯಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿಯೂ ಲಸಿಕೆಗೆ ವ್ಯವಸ್ಥೆ ಮಾಡಲಾಗಿದೆ.

ಲಸಿಕೆ ಪಡೆಯುವವರು ಆನ್‌ಲೈನ್‌ನಲ್ಲಿ ನೋಂದಣಿ ಮಾಡುವುದು ಕಡ್ಡಾಯವಾಗಿದೆ. ಅದರ ಪ್ರತಿಯನ್ನು ಲಸಿಕಾ ಕೇಂದ್ರಕ್ಕೆ ತರಬೇಕಿದೆ.

ಪ್ರಸಕ್ತ 45 ವರ್ಷ ಮೇಲಿನವರಿಗೆ ಮಾತ್ರ ಲಸಿಕೆ ನೀಡಲಾಗುತ್ತಿದೆ. 18ರಿಂದ 45 ವರ್ಷದೊಳಗಿನವರಿಗೆ ಲಸಿಕೆ ನೀಡುವ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು ಎಂದು ಆರೋಗ್ಯಾಧಿಕಾರಿ ಹೇಳಿದ್ದಾರೆ.

## ಆಕ್ಸಿಜನ್ ಕೊರತೆಯ ಸಾವಲ್ಲ, ಕೊಲೆ

**(1ನೇ ಪುಟದಿಂದ)** 25 ಲಕ್ಷ ರೂ.ಗಳ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಇದು ಸಾವುಗಳಲ್ಲ, ಸರ್ಕಾರವೇ ಮಾಡಿರುವ ಕೊಲೆಗಳು. ಈ ದುರಂತಕ್ಕೆ ಮುಖ್ಯಮಂತ್ರಿ, ಆರೋಗ್ಯ ಸಚಿವರು, ಜಿಲ್ಲಾ ಉಸ್ತುವಾರಿ ಮಂತ್ರಿಗಳೇ ಹೊಣೆ. ಈ ಎಲ್ಲರೂ ರಾಜೀನಾಮೆ ನೀಡಬೇಕು ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

ಚಾಮರಾಜನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿಗೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದ 23 ರೋಗಿಗಳು ಆಕ್ಸಿಜನ್ ಸಮಸ್ಯೆಯಿಂದಾಗಿ ಮರಣ ಹೊಂದಿದ್ದಾರೆ. ನನಗಿರುವ ಮಾಹಿತಿಯಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ 180 ಬೆಡ್‌ಗಳಿದ್ದು, ಅದರಲ್ಲಿ 120 ಆಕ್ಸಿಜನ್ ಬೆಡ್‌ಗಳು 20 ವೆಂಟಿಲೇಟರ್‌ಗಳು ಇವೆ. ಈ ರೋಗಿಗಳಿಗೆ ಚಿಕಿತ್ಸೆ ನೀಡಲು ಪ್ರತಿ ನಿತ್ಯ 350 ಆಕ್ಸಿಜನ್ ಸಿಲೆಂಡರ್‌ಗಳ ಅಗತ್ಯವಿದೆ. ಈ ಆಕ್ಸಿಜನ್ ಸಿಲಿಂಡರ್‌ಗಳು ಮೈಸೂರಿನ ಸದರನ್ ಮತ್ತು ಟರ್ಕಿ ಎಂಬ ಆಕ್ಸಿಜನ್ ಉತ್ಪಾದಕ ಘಟಕಗಳಿಂದ ಸರಬರಾಜಾಗುತ್ತಿವೆ.

ಇಲ್ಲಿ ಶುಕ್ರವಾರದಿಂದ ಆಕ್ಸಿಜನ್ ಸಮಸ್ಯೆಯಾಗಿದೆ. ಶನಿವಾರ ಕೇವಲ 30 ಸಿಲಿಂಡರ್‌ಗಳು ಸರಬರಾಜಾಗಿವೆ. ಚಾಮರಾಜನಗರದ ಅಧಿಕಾರಿಗಳು ಮೈಸೂರಿನ ಅಧಿಕಾರಿಗಳನ್ನು ಸಂಪರ್ಕಿಸಿದ್ದಾರೆ. ನಮ್ಮ ಮಾಜಿ ಸಂಸದರು, ಹಾಲಿ ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ್, ಉಸ್ತುವಾರಿ ಸಚಿವ ಸುರೇಶ್ ಕುಮಾರ್‌ಗೆ ಸಂಪರ್ಕಿಸಿ, ಆಕ್ಸಿಜನ್ ಕೊರತೆಯಾಗುತ್ತಿರುವುದನ್ನು ಗಮನಕ್ಕೆ ತಂದಿದ್ದಾರೆ. ಆದರೆ ರಾಜ್ಯ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. 30 ಸಿಲಿಂಡರ್‌ಗಳಲ್ಲಿ ಭಾನುವಾರ ರಾತ್ರಿ 9.00 ಗಂಟೆವರೆಗೆ ಆಸ್ಪತ್ರೆಯವರು ಆಕ್ಸಿಜನ್ ನೀಡಿದ್ದಾರೆ.

ಈ ಕೊಲೆಗಳಿಗೆ ಕಾರಣವಾದ ಸರ್ಕಾರವು, ಚಾಮರಾಜನಗರದಲ್ಲಾದ ದುರಂತ ಘಟನೆಯನ್ನು ತನಿಖೆ ಮಾಡಲು ಸರ್ಕಾರದ ಐ.ಎ.ಎಸ್. ಅಧಿಕಾರಿಯಾದ ಶಿವಯೋಗಿ ಕಳಸದ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ. ಈ ತನಿಖೆಯಿಂದ ಸತ್ಯ ಹೊರಬರಲು ಸಾಧ್ಯವಿಲ್ಲ. ಆದ್ದರಿಂದ ಅಲ್ಲಿನ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ರಚಿಸಿ, ತನಿಖೆ ಮಾಡಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಆಕ್ಸಿಜನ್ ಸಮಸ್ಯೆ ಶುಕ್ರವಾರದಿಂದಲೇ ಪ್ರಾರಂಭವಾಗಿದೆ. ಸರ್ಕಾರದಿಂದ ಆಕ್ಸಿಜನ್ ಒದಗಿಸಲು 3 ದಿನಗಳ ಅವಕಾಶವಿತ್ತು. ಈ ಅವಕಾಶವನ್ನು ಬಳಸಿಕೊಂಡು ಆಕ್ಸಿಜನ್ ಒದಗಿಸಿದ್ದರೆ 23 ಅಮಾಯಕ ಜನರು ಮರಣ ಹೊಂದುವ ಅನಿವಾರ್ಯತೆ ಉದ್ಭವವಾಗುತ್ತಿರಲಿಲ್ಲ. ಜನರ ಸಾವಿಗೆ ಸರ್ಕಾರ ಕಾರಣವಾಗಿರುವುದರಿಂದ ಸತ್ತವರ ಸಾವನ್ನು ಸಹಜವೆಂದು ಭಾವಿಸಲಾಗದು. ಆದುದರಿಂದ ಈ ಅಮಾಯಕರ ಕೊಲೆಗಳಿಗೆ ಕಾರಣರಾಗಿರುವ ಮುಖ್ಯಮಂತ್ರಿಗಳು, ಆರೋಗ್ಯ ಮಂತ್ರಿಗಳು, ಜಿಲ್ಲಾ ಸಚಿವರು ಈ ಕೂಡಲೇ ರಾಜೀನಾಮೆ ನೀಡಿ ಹೊರ ನಡೆಯಬೇಕು ಎಂದವರು ಒತ್ತಾಯಿಸಿದ್ದಾರೆ.

## 10 ಕೆ.ಜಿ. ಅಕ್ಕಿ ನೀಡುವಂತೆ ಮಹಿಳಾ ಕಾಂಗ್ರೆಸ್ ಒತ್ತಾಯ



**ಹರಪನಹಳ್ಳಿ**

ಹರಪನಹಳ್ಳಿ, ಮೇ 3- ತಾಲ್ಲೂಕಿನ ಕಂಚಿಕೇರಿಯಲ್ಲಿ ಪ್ರದೇಶ ಮಹಿಳಾ ಕಾಂಗ್ರೆಸ್ ವತಿಯಿಂದ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವ ಮೂಲಕ ನಮಗೆ 2 ಕೆಜಿ ಅಕ್ಕಿ ಬೇಡ. 10 ಕೆಜಿ ಅಕ್ಕಿ ಬೇಕು ಎನ್ನುವ ಅಗ್ರಹ ಪೂರಕ ಒತ್ತಾಯ ಮಾಡಿದರು.

ಈ ವೇಳೆ ತಾ.ಪಂ. ಮಾಜಿ ಸದಸ್ಯರಾದ ಕಂಚಿಕೇರಿ ಜಯಲಕ್ಷ್ಮೀ, ಕೆ. ವನಜಾಕ್ಷಿ, ಬಿ. ಮಂಜುಳಾ, ಬಿ. ಗೌರಮ್ಮ ಕಾವ್ಯ, ಸೌಮ್ಯ, ಬಿ. ಗಂಗಮ್ಮ ಎಂ. ಕವಿತಾ, ಬಿ. ಸುನೀತ ಗ್ರಾಮ ಪಂಚಾಯ್ತಿ ಸದಸ್ಯರುಗಳಾದ ಕೆ. ಕೆಂಚಪ್ಪ, ಎಂ.ಕೆ. ಅಶ್ವಿನಿ, ಮುಖಂಡರಾದ ಎ. ಕರಿಬಸಮ್ಮ, ಡಿ. ಸಿದ್ದಮ್ಮ ಎಂ. ಕವಿತಾ ಹೊನ್ನಪ್ಪ, ಸಿ. ಮಮತ ಶೇಖರಪ್ಪ, ಚೆನ್ನವೀರಮ್ಮ, ಎಂ. ಸಿದ್ದಮ್ಮ ಸಿದ್ದಮ್ಮ ಪಿ. ಅಕ್ಕಮ್ಮ ಪಿ. ರೇಣುಕಾ ಇನ್ನಿತರರಿದ್ದರು.

## ಲಾಕ್‌ಡೌನ್ ಇದ್ದರೂ ಸಂಚಾರ, ಪೊಲೀಸರಿಂದ ಲಾಟಿ ರುಚಿ




ಹರಿಹರ, ಮೇ 3- ಕೊರೊನಾ ರೋಗವನ್ನು ತಡೆಗಟ್ಟಲು ಸರ್ಕಾರ ಲಾಕ್ ಡೌನ್ ಘೋಷಣೆ ಮಾಡಿದ್ದು, ಅದನ್ನು ಉಲ್ಲಂಘನೆ ಮಾಡಿ ಓಡಾಡುವ ಸಾರ್ವಜನಿಕರಿಗೆ ಪೊಲೀಸ್ ಪಿಎಸ್ಐ ಸುನಿಲ್ ಬಸವರಾಜ್ ತೆಲಿ ಮತ್ತು ಸಿಬ್ಬಂದಿಗಳು ಸಾರ್ವಜನಿಕರಿಗೆ ಲಾಟಿ ರುಚಿ ತೋರಿಸುವುದರರ ಜೊತೆಗೆ ಅವರಿಗೆ ದಂಡವನ್ನು ಹಾಕಿ ಮನೆಗಳಿಗೆ ಕಳಿಸಿದರು.

ಸಾರ್ವಜನಿಕರು ಏನಾದರೂ ಒಂದು ಕುಂಟು ನೆಪವನ್ನು ಮಾಡಿಕೊಂಡು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಓಡಾಡುವುದಕ್ಕೆ ಮುಂದಾಗಿದ್ದು, ಅದನ್ನು ತಡೆಯಲು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮತ್ತು ಪೊಲೀಸ್ ಇಲಾಖೆಯ ಸಿಪಿಐ ಸತೀಶ್ ಕುಮಾರ್, ಪಿಎಸ್ಐ ಸುನಿಲ್ ಬಸವರಾಜ್ ತೆಲಿ ಸೇರಿದಂತೆ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಶ್ರಮ ವಹಿಸಿದ್ದಾರೆ. ಕಾನೂನು ಉಲ್ಲಂಘನೆ ಮಾಡಿದವರಿಗೆ ಲಾಟಿ ರುಚಿ ತೋರಿಸಿ, ದಂಡವನ್ನು ಹಾಕಿದರು. ನಗರದ ಪ್ರತಿಯೊಂದು ಬಡಾವಣೆಯಲ್ಲಿ ಸಂಚಾರ ಮಾಡಿ ಜನರು ಹೆಚ್ಚಾಗಿ ಸೇರಿದಂತೆ ಅವರನ್ನು ಚದುರಿಸಿ ಮನೆಗಳಿಗೆ ಕಳಿಸಿದರು.

ಈ ಸಂದರ್ಭದಲ್ಲಿ ಕ್ರೈಮ್ ಪಿಎಸ್ಐ ಲತಾ ತಾವಳೆಕರ್, ಸಿಬ್ಬಂದಿಗಳಾದ ಡಿ.ಟಿ.ಶ್ರೀನಿವಾಸ್, ಸತೀಶ್, ಸಂತೋಷ್, ಶಿವಪದ್ಮ, ಮುರುಳಿಧರ್, ಮಂಜುನಾಥ್, ದ್ವಾರಕೀಶ್ ಇತರರು ಹಾಜರಿದ್ದರು.

## ಕೂಡ್ಲಿಗಿ : ಜನತಾ ಕರ್ಫ್ಯೂಗೆ ಸ್ಪಂದನೆ

ಕೂಡ್ಲಿಗಿ, ಮೇ 3- ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಜನತಾ ಕರ್ಫ್ಯೂಗೆ ಜನತೆ ಸ್ಪಂದಿಸುವ ಮೂಲಕ ರಸ್ತೆಗಿಳಿಯದೇ ಮನೆಯಲ್ಲಿಯೇ ಇದ್ದು ಸಹಕಾರ ನೀಡಿದರು. ಆಸ್ಪತ್ರೆ, ಬ್ಯಾಂಕ್ ಸೇರಿದಂತೆ ಅಗತ್ಯ ಸೇವೆ ಬೇಕಾಗಿದ್ದವರು ಬೈಕ್, ಆಟೋಗಳಲ್ಲಿ ಸಂಚರಿಸಿದರು. ಪೊಲೀಸರು ಬೈಕ್ ಮತ್ತು ಆಟೋಗಳಲ್ಲಿ ಬಂದವರಿಗೆ ಕಾರಣ ಕೇಳಿ ಸಂಚರಿಸಲು ಅವಕಾಶ ಮಾಡಿಕೊಟ್ಟರು. ಹಳ್ಳಿಗಳಲ್ಲಿಯೂ ಸಹ ಜನತೆ ಮಾಸ್ಕ್ ಹಾಕಿಕೊಂಡು ಜೀವನ ಮಾಡುತ್ತಿರುವುದು ಕಂಡು ಬರುತ್ತಿದೆ.

## ತನಿಖೆಗೆ ಸೂಚನೆ

**(1ನೇ ಪುಟದಿಂದ)** ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಅವರು ಸುದ್ದಿಗಾರರಿಗೆ ತಿಳಿಸಿದರು. ಚಾಮರಾಜನಗರದಲ್ಲಿ ಆಕ್ಸಿಜನ್ ಸಿಗದ ಹಿನ್ನೆಲೆಯಲ್ಲಿ ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ ಎಂಬ ಮಾಹಿತಿ ಇದೆ. ಆದರೆ ಇವರ ಸಾವಿಗೆ ನಿಜವಾಗಿಯೂ ಇದ್ದ ಕಾರಣ ಏನು ಎಂಬುದರ ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

## ಸುಪ್ರೀಂ ಸೂಚನೆ

**(1ನೇ ಪುಟದಿಂದ)** ಕಂಡು ಬರುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯಗಳು ಹಾಗೂ ಖಾಸಗಿಯವರು 18ರಿಂದ 44 ವರ್ಷದವರಿಗೆ ಲಸಿಕೆ ನೀಡಲು ಶೇ.50ರಷ್ಟು ಲಸಿಕೆ ಖರೀದಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಇದರಿಂದಾಗಿ ರಾಜ್ಯಗಳು ಉತ್ಪಾದಕರ ಜೊತೆ ನೇರವಾಗಿ ಖರೀದಿ ನಡೆಯಬೇಕಿದೆ. ಇದು ಅರಾಜಕತೆ ಹಾಗೂ ಅನಿಶ್ಚಿತತೆಗೆ ದಾರಿ ಮಾಡಿಕೊಡಲಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

18 ರಿಂದ 44 ವರ್ಷದವರಿಗೆ ಲಸಿಕೆ ನೀಡಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದ ನಂತರ, ಲಸಿಕೆಯ ಮೂಲವನ್ನು ತಿಳಿಸುವುದು ತಾರ್ಕಿಕವಾಗಿದೆ. ಇಲ್ಲದೇ ಹೋದರೆ ಪ್ರತಿ ರಾಜ್ಯ ಲಸಿಕೆ ಪಡೆಯಲು ಹಾಗೂ ಸಾಗಣೆಗೆ ವ್ಯವಸ್ಥೆ ಮಾಡಲು ಉತ್ಪಾದಕರ ಜೊತೆ ಸಂಧಾನ ನಡೆಸಬೇಕಾಗುತ್ತದೆ ಎಂದು ನ್ಯಾಯಾಲಯ ತಿಳಿಸಿದೆ.

## ಬೆಡ್ ಹೆಚ್ಚಳ, ಆಕ್ಸಿಜನ್‌ಗೆ ಹೆಚ್ಚುವರಿ ವಾಹನ : ಸಂಸದ

**(1ನೇ ಪುಟದಿಂದ)** ಬಂದರೆ ಅದರ ವಿತರಣೆಗೆ ಮಂಗಳವಾರದಿಂದಲೇ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.


ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಮೆಡಿಕಲ್ ಆಕ್ಸಿಜನ್ ಪ್ಲಾಂಟ್‌ಗೆ ಆಕ್ಸಿಜನ್ ಪೂರೈಕೆ ಮಾಡಲು ಎಂಎಸ್‌ಪಿಎಲ್ ನವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅವರು ಸದರನ್ ಆಕ್ಸಿಜನ್ ಏಜೆನ್ಸಿಯ ಮೂಲಕ ಆಸ್ಪತ್ರೆಗೆ ಸರಬರಾಜು ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಆಕ್ಸಿಜನ್ ಕೊರತೆ ಇಲ್ಲ. ಆದರೆ, ಆಕ್ಸಿಜನ್ ಪ್ಲಾಂಟ್ ಮತ್ತು ವಾಲ್ವ್‌ನಲ್ಲಿ ಸಣ್ಣಪುಟ್ಟ ತೊಂದರೆಗಳಿದ್ದು ಅದನ್ನು ಬಳ್ಳಾರಿಯ ಇಂಜಿನಿಯರ್ ಪರಿಶೀಲಿಸಿ ಕೆಲವು ಮಾರ್ಗೋಪಾಯ ತಿಳಿಸಿದ್ದಾರೆ ಎಂದರು. ಬೆಡ್‌ಗಳ ಸಾಮರ್ಥ್ಯ ಹೆಚ್ಚಿಸಿಕೊಳ್ಳುವಂತೆ ಎರಡು ಮೆಡಿಕಲ್ ಕಾಲೇಜಿನವರಿಗೆ ಕೇಳಿದ್ದೇವೆ. ಇದಕ್ಕೆ ಅವರು ಸಿದ್ಧವಿದ್ದರೂ ವೈದ್ಯಕೀಯ ಆಕ್ಸಿಜನ್ ಪೂರೈಕೆ ಆಗಬೇಕು. ಇದಕ್ಕಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಬಾಪೂಜಿ ಆಸ್ಪತ್ರೆಯ ಡಾ.ರವಿಯವರು ವೈದ್ಯರು ಹಾಗೂ ಇಂಟರ್ನ್ಸ್ ತಮ್ಮ ಜೀವದ ಭಯ ತೊರೆದು ಹಗಲು, ರಾತ್ರಿ ಕೊರೊನಾ ರೋಗಿಗಳನ್ನು ನೋಡಿಕೊಳ್ಳುತ್ತಿದ್ದು, ಇವರಿಗೆ ಪ್ರತಿದಿನ ರೂ.1 ಸಾವಿರದಂತೆ ಪ್ರೋತ್ಸಾಹ ಧನ ನೀಡುವಂತೆ ಮನವಿ ಮಾಡಿದ್ದಾರೆ. ಸರ್ಕಾರದಿಂದ ಇದಕ್ಕೆ ಪ್ರಸಕ್ತ ಅವಕಾಶವಿಲ್ಲ. ಈ ಹಿನ್ನೆಲೆಯಲ್ಲಿ ಸಂಸದ ಡಾ.ಜಿ.ಎಂ.ಸಿದ್ದೇಶ್ವರ ತಮ್ಮ ಟ್ರಸ್ಟ್ ವತಿಯಿಂದ ರೂ.5 ಲಕ್ಷ ನೀಡುವುದಾಗಿ ತಿಳಿಸಿದ್ದಾರೆ ಎಂದು ಬೀಳಗಿ ಹೇಳಿದರು.

ಈ ಸಂದರ್ಭದಲ್ಲಿ ಪಾಲಿಕೆ ಮಹಾಪೌರ ವೀರೇಶ್ ಎಸ್.ಟಿ., ಎಸ್ಪಿ ಹನುಮಂತರಾಯ, ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್‌ನಾಯಕ್, ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಜಯಪ್ರಕಾಶ್, ಡಿಎಸ್‌ಓ ಡಾ.ರಾಘವನ್, ಡಾ.ಶಶಿಧರ್, ಡಾ. ಗಿರೀಶ್, ಡಾ.ರವಿ, ಬಳ್ಳಾರಿಯ ಬಯೋಮೆಡಿಕಲ್ ಇಂಜಿನಿಯರ್ ಶಾಂತರಾಜು ಮತ್ತಿತರರು ಉಪಸ್ಥಿತರಿದ್ದರು.


**ವಧು ಬೇಕಾಗಿದೆ**
ಖಾಸಗಿ ಕಾಲೇಜ್‌ನಲ್ಲಿ, ಉಪನ್ಯಾಸಕ ವೃತ್ತಿಯಲ್ಲಿರುವ 34 ವರ್ಷ ವಯಸ್ಸಿನ, ಸಾಧಾರಣ ಮೈಕಟ್ಟಿನ, ಸ್ಫುರದ್ರೂಪಿ M. Com., ಆದ ಲಿಂಗಾಯಿತ ಶಿವಸಿಂಪಿ (ಜವಳಿ) ವರನಿಗೆ 28ರ ಆಸುಪಾಸಿನ ಲಿಂಗಾಯಿತ ವಧು ಬೇಕಾಗಿದ್ದಾರೆ. ಸ್ವಂತ ಮನೆ ಹಾಗೂ ಬಾಡಿಗೆ ಬರುವ ಮಳಿಗೆ ಇದ್ದು ವರ ತಂದೆ- ತಾಯಿಗಳೊಂದಿಗೆ ವಾಸವಾಗಿದ್ದಾರೆ. ಆಸಕ್ತರು ಸಂಪರ್ಕಿಸಿರಿ. ಮುಂಜಾನೆ 9 ರಿಂದ 11, ಸಂಜೆ 6 ರಿಂದ 8
99024 46538
99162 42588



## ಎನ್.ಡಿ. ಹನುಮಂತಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೊಸನಾಯಕನಹಳ್ಳಿ ಗ್ರಾಮದ ವಾಸಿ, **ಶ್ರೀ ಎನ್.ಡಿ. ಹನುಮಂತಪ್ಪ** ಅವರು ದಿನಾಂಕ 3.5.2021ರ ಸೋಮವಾರ ಮಧ್ಯಾಹ್ನ 1.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷವಾಗಿತ್ತು. ಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.5.2021ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಹೊಸನಾಯಕನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಪತ್ನಿ : ಶ್ರೀಮತಿ ಜಯಮ್ಮ ಹನುಮಂತಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸಹೋದರ ಮತ್ತು ಸಹೋದರಿಯರು, ಬೂದಾಳ್ ವಂಶಸ್ಥರು, ಹೊಸನಾಯಕನಹಳ್ಳಿ ಗ್ರಾಮಸ್ಥರು, ಮೊ. : 63627 69552.

## ಎಂ.ಬಿ. ಜಯಮ್ಮ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್, 7ನೇ ಕ್ರಾಸ್, ಡೋರ್ ನಂ. 230 ವಾಸಿ, ಲೇ॥ ಎಂ. ಬಸಪ್ಪ ಅವರ ಧರ್ಮಪತ್ನಿ **ಶ್ರೀಮತಿ ಎಂ.ಬಿ. ಜಯಮ್ಮ** ಅವರು ದಿನಾಂಕ 02.05.2021ರ ಭಾನುವಾರ ಸಂಜೆ 5.45ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷವಾಗಿತ್ತು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 03.05.2021ರ ಸೋಮವಾರ ಬೆಳಿಗ್ಗೆ 10.45 ಕ್ಕೆ ದಾವಣಗೆರೆ ತಾಲ್ಲೂಕು ದೇವರಹಟ್ಟಿ ಗ್ರಾಮದಲ್ಲಿರುವ ಸ್ವಂತ ಜಮೀನಿನಲ್ಲಿ ನೆರವೇರಿತು.

**ದುಃಖತಪ್ತ ಕುಟುಂಬ ವರ್ಗ**
ಎಂ.ಬಿ. ಮಧುಸೂದನ್, 98806 02121
ಎಂ.ಬಿ. ಶಶಿಧರ, 98453 57589, ಎಂ.ಬಿ. ಸುರೇಶ, 97416 27999
ಬೇತೂರು ಮರಡಿ ವಂಶಸ್ಥರು, ದಾವಣಗೆರೆ.


## ಶ್ರೀಮತಿ ನಳಿನ ಮಲ್ಲಿಕಾರ್ಜುನ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 4ನೇ ಕ್ರಾಸ್ # 627/10 'ಶಿವ ಕೃಪ' ವಾಸಿ ಮಲ್ಲಿಕಾರ್ಜುನ್ ರವರ ಧರ್ಮಪತ್ನಿ **ಶ್ರೀಮತಿ ನಳಿನ ಮಲ್ಲಿಕಾರ್ಜುನ್** (64) ಅವರು ದಿನಾಂಕ 03.04.2021ರ ಸೋಮವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಪತಿ, ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಸೋಮವಾರ ಸಂಜೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.


ಇಂತಿ ದುಃಖತಪ್ತರು: ಪತಿ: **ಮಲ್ಲಿಕಾರ್ಜುನ್**,
ಮಗಳು : **ಜ್ಯೋತಿ ಭೋಜರಾಜ್**, ಅಳಿಯ: **ಭೋಜರಾಜ್**
ಅಕ್ಕ : **ಉಷಾ ಸದಾಶಿವಪ್ಪ, ಬೀರೂರು**
**ಬಿಂದಪ್ಪರ ವಂಶಸ್ಥರು ಹಾಗೂ ಬಂಧು-ಮಿತ್ರರು.**

## ಪಾರ್ವತಮ್ಮ (ಕಾಳಮ್ಮ) ನಿಧನ




ದಾವಣಗೆರೆ ಜಾಲಿನಗರ ಟೀಚರ್ಸ್ ಕಾಲೋನಿ 1ನೇ ಮೇನ್, 2ನೇ ಕ್ರಾಸ್ ವಾಸಿ ಬೆಳಕೇರಿ ಬಸವರಾಜಪ್ಪನವರ ಪತ್ನಿ ಪಾರ್ವತಮ್ಮ (ಕಾಳಮ್ಮ) (67) ಅವರು ದಿನಾಂಕ 3.05.2021ರ ಸೋಮವಾರ ಸಂಜೆ 4.30ಕ್ಕೆ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.05.2021ರ ಮಂಗಳವಾರ ಬೆಳಗ್ಗೆ 10 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ಶರತ್ ಜಿ. ನಿಧನ




ದಾವಣಗೆರೆ ಹಳೇ ಜಾಲಿನಗರ 1ನೇ ಮೇನ್, 1ನೇ ಕ್ರಾಸ್ ವಾಸಿ ಶರತ್ ಜಿ. (23) ಇವರು ದಿನಾಂಕ 03.05.2021 ರ ಸೋಮವಾರ ಸಂಜೆ 5.30ಕ್ಕೆ ನಿಧನರಾದರು. ತಾಯಿ, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.05.2021 ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.

## ಪೂಜನಿಂಗಳ್ಳಿ ಬಸವಲಿಂಗಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ ಪೂಜನಿಂಗಳ್ಳಿ ಬಸಲಿಂಗಪ್ಪ (84) ಅವರು ದಿನಾಂಕ 3.05.2021ರ ಸೋಮವಾರ ಸಂಜೆ 6 ಗಂಟೆಗೆ ನಿಧನರಾದರು. ಓರ್ವ ಪುತ್ರಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 04.05.2021 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಕಕ್ಕರಗೊಳ್ಳದಲ್ಲಿ ನೆರವೇರಲಿದೆ.

## ಮಂಜುಳ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ 4ನೇ ಕ್ರಾಸ್ ವಾಸಿ ವಿಶ್ವನಾಥಯ್ಯ ಅವರ ಧರ್ಮಪತ್ನಿ ಶ್ರೀಮತಿ ಮಂಜುಳ (31) ಅವರು ದಿನಾಂಕ 3.05.2021ರ ಸೋಮವಾರ ರಾತ್ರಿ 8.30ಕ್ಕೆ ನಿಧನರಾದರು. ಪತಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 4.05.2021ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಅಕ್ಕಮಹಾದೇವಿ ಜಯಂತಿ ಆಚರಣೆ



ದಾವಣಗೆರೆ, ಮೇ 3- ವಿರಕ್ತ ಮಠದಲ್ಲಿ ಮಹಿಳಾ ಬಸವ ಕೇಂದ್ರದಿಂದ ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಶ್ರೀ ಬಸವಪ್ರಭು ಸ್ವಾಮೀಜಿ, ಮಹಿಳಾ ಬಸವಕೇಂದ್ರದ ಅಧ್ಯಕ್ಷೆ ಮಹಾದೇವಮ್ಮ, ಪಾರ್ವತಮ್ಮ, ಶಿಕ್ಷಕಿ ಸೌಭಾಗ್ಯ ಇತರರು ಇದ್ದರು.

## ಕೊಮಾರನಹಳ್ಳಿಯಲ್ಲಿ ಸಣ್ಣ ರಥೋತ್ಸವ



ಮಲೇಬೆನ್ನೂರು, ಮೇ 3- ಕೊಮಾರನಹಳ್ಳಿ ಗ್ರಾಮದ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಸಣ್ಣ ರಥೋತ್ಸವವು ದವನದ ಹುಣ್ಣಿಮೆ ಅಂಗವಾಗಿ ಸರಳ ಹಾಗೂ ಸಂಪ್ರದಾಯಬದ್ಧವಾಗಿ ಜರುಗಿತು. ಕೋವಿಡ್ ಹಿನ್ನೆಲೆ ಯಲ್ಲಿ ದೊಡ್ಡ ರಥೋತ್ಸವವನ್ನು ರದ್ದು ಮಾಡಿರುವ ಕಾರಣ, ದೇವಸ್ಥಾನದ ಆವರಣದಲ್ಲೇ ಸಣ್ಣ ರಥದಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯನ್ನು ಇಟ್ಟು ಭಕ್ತರು ತೇರನ್ನೆಳೆದು ಸಂಭ್ರಮಿಸಿದರು.

## ಶಿಕ್ಷಕ ವರ್ಗಕ್ಕೆ ಕೋವಿಡ್ ಲಸಿಕಾ ಉತ್ಸವ



ದಾವಣಗೆರೆ, ಮೇ 3- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಉತ್ತರ ವಲಯ ಸಹಯೋಗದೊಂದಿಗೆ 45 ವರ್ಷ ಮೇಲ್ಪಟ್ಟ ಶಿಕ್ಷಕರು, ಸಿಬ್ಬಂದಿಗಳಿಗೆ ಕೋವಿಡ್-19 ಲಸಿಕಾ ಉತ್ಸವ ಶಿಬಿರವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ (ಮಾಜಿ ಪುರಸಭೆ) ಹಮ್ಮಿಕೊಳ್ಳಲಾಗಿತ್ತು.

ಕ್ಷೇತ್ರ ಶಿಕ್ಷಣಾದಿಕಾರಿ ಜಿ. ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದರು. ಕೋವಿಡ್ ಲಸಿಕಾ ಜಿಲ್ಲಾ ನೋಡಲ್ ಅಧಿಕಾರಿಗಳಾದ ಡಾ. ದೇವರಾಜ್, ತಾಲ್ಲೂಕು ವೈದ್ಯಾಧಿಕಾರಿ ಡಾ. ವೆಂಕಟೇಶ್ ನಾಯ್ಕ, ನಗರ-1 ರ ವೈದ್ಯಾಧಿಕಾರಿ ಡಾ. ನಾಗರಾಜ್, ಕ್ಷೇತ್ರ ಸಮನ್ವಯಾಧಿಕಾರಿ ಬಿ. ಸುರೇಂದ್ರ ನಾಯ್ಕ್, ತಾಲ್ಲೂಕು ನೋಡಲ್ ಅಧಿಕಾರಿ ಹೆಚ್.ವಿ. ಶ್ರೀನಿವಾಸ್ ಹಾಜರಿದ್ದರು.

## ರಾಣೇಬೆನ್ನೂರಿನಲ್ಲಿ ಹನುಮ ಜಯಂತಿ



ರಾಣೇಬೆನ್ನೂರು, ಮೇ 3- ಪಟ್ಟಣದ ಪದ್ಮಶಾಲಿ ಸಮಾಜದ ಶ್ರೀ ಗುರು ಮಾರ್ಕಂಡೇಶ್ವರ ದೇವಸ್ಥಾನದಲ್ಲಿರುವ ಶ್ರೀ ಹನುಮಂತ ದೇವರ ಅಭಿಷೇಕ ಹಾಗೂ ತೊಟ್ಟಿಲೋತ್ಸವವನ್ನು ನೆರವೇರಿಸಲಾಯಿತು.

ಶ್ರೀಕ್ಷೇತ್ರದಲ್ಲಿರುವ ಎಲ್ಲಾ ದೇವಾನುದೇವತೆಗಳಿಗೆ ಪೂಜೆ ಮಾಡಿ, ಅಲಂಕರಿಸಿ, ಶ್ರೀ ಹನುಮಂತ ದೇವರಿಗೆ ಅಭಿಷೇಕ ಮತ್ತು ಕುಂಕುಮಾರ್ಚನೆ ನಂತರ ಎಲೆಪೂಜೆ ಮಾಡಲಾಯಿತು. ನಂತರ ಸುಮಂಗಲೆಯರು ದೇವರ ಮೂರ್ತಿಯನ್ನು ತೊಟ್ಟಿಲಿಗೆ ಹಾಕಿ ಜೋಗುಳ ಹಾಡಿ, ನಾಮಕರಣ ಮಾಡಿದರು. ಭಕ್ತರು ಸೇರಿ ಪಾಲಿಕೋತ್ಸವ ಮಾಡಿ ಮಹಾ ಮಂಗಳಾರತಿ ಮಾಡ ಲಾಯಿತು. ಲಕ್ಷ್ಮಣ ಕಡ್ಲೆಬಾಳು, ಪರಶುರಾಮ ಅಗಡಿ, ಪ್ರವೀಣ ಗುತ್ತೂರು, ಪರಮೇಶಿ ಬೂಶಪ್ಪನವರ, ರೇಣುಕಾ ಕಡ್ಲೇಬಾಳು, ಅಭಿಷೇಕ್ ಇನ್ನಿತರರಿದ್ದರು.

## ನಗರದಲ್ಲಿ ಹನುಮ ಜಯಂತಿ ಆಚರಣೆ



ದಾವಣಗೆರೆ, ಮೇ 3- ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಎ. ನಾಗರಾಜ್, ಪದಾಧಿಕಾರಿಗಳಾದ ಉದಯ್ ಕುಮಾರ್, ನಾಗರಾಜ್, ಹೊನ್ನಜ್ಜಿ, ಅರ್ಚಕ ಬಸಯ್ಯ ಇತರರು ಉಪಸ್ಥಿತರಿದ್ದರು.

# ಕದಳಿ ಮಹಿಳಾ ವೇದಿಕೆಯಿಂದ ಕಮ್ಮಟ, ಅಕ್ಕಮಹಾದೇವಿ ಜಯಂತಿ ಆಚರಣೆ



ದಾವಣಗೆರೆ, ಮೇ 3-ಕದಳಿ ಮಹಿಳಾ ವೇದಿಕೆ ಜಿಲ್ಲಾ ಘಟಕದಿಂದ 124ನೇ ಕದಳಿ ಕಮ್ಮಟದಲ್ಲಿ ಅಕ್ಕಮಹಾದೇವಿ ಜಯಂತಿ ಹಾಗು ಸ್ಮರಣೋತ್ಸವವನ್ನು ವಾಟ್ಸಾಪ್ ಮೂಲಕ ಆಯೋಜಿಸಲಾಗಿತ್ತು.

ಅಕ್ಕಮಹಾದೇವಿ ಜಯಂತಿ ಅಂಗವಾಗಿ 'ಅಕ್ಕನ ವಚನಾಮೃತ' ವಿಷಯ ಕುರಿತು ಬಿಐಇಟಿ ಕಾಲೇಜಿನ ಪ್ರೊ. ಜಿ.ಎಸ್. ಸುನೀತಾ ಮಾತನಾಡಿ, ಅಕ್ಕನ ವಚನಗಳನ್ನು ಉದಾಹರಣೆಯೊಂದಿಗೆ ಅರ್ಥೈಸಿದರು. ಶರಣರ ಜಯಂತಿಗಳ ಆಚರಣೆ ಮೂಲಕ ಉದಾರತೆ ಮತ್ತು ಮನೋವೈಶಾಲ್ಯತೆ ತರುವುದು, ಮಾನವೀಯ ಸಂಬಂಧಗಳಿಗೆ ಹೆಚ್ಚು ಪ್ರಾಧಾನ್ಯ ನೀಡುವುದು ಇಂದಿನ ಅವಶ್ಯಕತೆಯಾಗಿದೆ ಎಂದು ತಿಳಿಸಿದರು.

ದಿ. ಪಾರ್ವತಮ್ಮ ಶಂಕರಪ್ಪ ಬುಳಗಣ್ಣನವರ್, ದಿ. ದೊಗ್ಗಳ್ಳಿ ಬಸವರಾಜಪ್ಪ ಹಾಗು ದಿ. ಶಂಕರಮ್ಮ ಕೆಂಚಪ್ಪ, ದಿ. ಎ. ತುಪ್ಪದಯ್ಯ ಇವರ ಸ್ಮರಣೆ ಮಾಡಲಾಯಿತು. ಕಮ್ಮಟದ ಪ್ರಾಯೋಜಕರಾದ ಸುಧಾ ದಿಬ್ಬದಳ್ಳಿ, ಸುವರ್ಣಮ್ಮ ದೊಗ್ಗಳ್ಳಿ, ಶಾಂತವೀರಮ್ಮ ಹಾಗು ಡಾ. ಡಿ.ಕೆ. ಕೆಂಚಪ್ಪ ಇವರುಗಳನ್ನು ಅಭಿನಂದಿಸಲಾಯಿತು.

ಇದೇ ವೇಳೆ ಜಯಂತಿ ಅಂಗವಾಗಿ ಸಾರ್ವಜನಿಕರಿಗೆ ಹಾಗೂ ವೇದಿಕೆಯ ಸದಸ್ಯರಿಗೆ ವಚನ ವಿಶ್ಲೇಷಣೆ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಸದಸ್ಯರು ಹಾಗು ಸಾರ್ವಜನಿಕ ವಿಭಾಗದಲ್ಲಿ ವಾಸಂತಿ, ಕೋಮಲ ವಿ. ಕುಮಾರ್, ಎಚ್. ಆರ್. ವನ ಜಾಕ್ಷಿ, ಬಿ.ಜಿ. ಗೀತಾ, ಪಿ. ವೀಣಾ, ಸರೋಜ ಮುಂಡಾಸ್ ಬಹುಮಾನ ಪಡೆದಿದ್ದಾರೆ. ಪದಾಧಿಕಾರಿಗಳ ವಿಭಾಗದಲ್ಲಿ ವಿಜಯಲಕ್ಷ್ಮಿ ಬಸವರಾಜ್, ಮಮತಾ ನಾಗರಾಜ್, ಚಂದ್ರಿಕಾ ಮಂಜುನಾಥ್ ವಿಜೇತರಾಗಿದ್ದಾರೆ.

ಆಶಾ ಎಂ. ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಗಂಗಾಂಬಿಕ ತಂಡದವರು ವಚನ ಪ್ರಾರ್ಥನೆ ಮಾಡಿದರು. ಕಾರ್ಯದರ್ಶಿ ವಿಜಯ ಚಂದ್ರಶೇಖರ್ ಸ್ವಾಗತಿಸಿದರು. ಖಜಾಂಚಿ ರತ್ನ ರೆಡ್ಡಿ ಸ್ಮರಣಾಂಜಲಿಯ ಪ್ರಾಯೋಜಕರ ಸೇವೆಯನ್ನು ಶ್ಲಾಘಿಸಿದರು. ಸಹ ಕಾರ್ಯದರ್ಶಿ ಪೂರ್ಣಿಮಾ ಪ್ರಸನ್ನಕುಮಾರ್ ನಿರೂಪಿಸಿದರು.

# ಅನಧಿಕೃತ ಧಾರ್ಮಿಕ ಕಟ್ಟಡಗಳ ಮಾಹಿತಿ ನೀಡಿ

**ಜಗಳೂರು ತಹಶೀಲ್ದಾರ್ ಡಾ. ನಾಗವೇಣಿ**

ಜಗಳೂರು, ಮೇ 3- ಪಟ್ಟಣದ ಸಾರ್ವಜನಿಕ ಸ್ಥಳಗಳಾದ ರಸ್ತೆ, ಉದ್ಯಾನವನ ಗಳಲ್ಲಿ ಅನಧಿಕೃತವಾಗಿ ಧಾರ್ಮಿಕ ಕಟ್ಟಡಗಳಿದ್ದರೆ ಸಾರ್ವಜನಿಕರು ಮಾಹಿತಿ ನೀಡುವಂತೆ ತಹಶೀಲ್ದಾರ್ ಡಾ. ನಾಗವೇಣಿ ತಿಳಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲು ಉಚ್ಚ ನ್ಯಾಯಾಲಯವು ಆದೇಶಿಸಿದ್ದು ಸಾರ್ವಜನಿಕರು ತಾಲ್ಲೂಕು ಕಛೇರಿ/ ಪಟ್ಟಣ ಪಂಚಾಯ್ತಿ /ತಾಲ್ಲೂಕು ಪಂಚಾಯ್ತಿ ಅಧಿಕಾರಿ ಗಳಿಗೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಆಗಮಿಸಿರುವ ವ್ಯಕ್ತಿಗಳು ಸಮೀಪದ ಆರೋಗ್ಯ ಕೇಂದ್ರಗಳಿಗೆ ತೆರಳಿ ಕೋವಿಡ್ ಪರೀಕ್ಷೆಗೆ ಹಾಜರಾಗಬೇಕು.

ವರದಿ ಬರುವವರೆಗೆ ಮನೆಯಲ್ಲಿದ್ದು ಸಹಕರಿಸಬೇಕು ಎಂದು ಹೇಳಿದ್ದಾರೆ. ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆಗಳು: ತಹಶೀಲ್ದಾರ್ -9986182944, ಪ.ಪಂ. ಮುಖ್ಯಾಧಿಕಾರಿ 9986290870, ತಾ.ಪಂ. ಇಓ 9449132704.

# ಕೋವಿಡ್ ತಡೆಗೆ ಕಟ್ಟುನಿಟ್ಟಾಗಿ ನಿಯಮ ಪಾಲಿಸಲು ಜಿಲ್ಲಾ ನ್ಯಾಯಾಧೀಶರ ಮನವಿ

ದಾವಣಗೆರೆ, ಮೇ 3- ಕೋವಿಡ್-19 ರ ಎರಡನೇ ಅಲೆ ದೇಶದಲ್ಲಿ ವ್ಯಾಪಕವಾಗಿದೆ. ಅದರಲ್ಲೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೊರೊನಾ ವೇಗವಾಗಿ ಹೆಚ್ಚುತ್ತಿದೆ. ಈ ಕಾರಣದಿಂದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಜನಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗಿದೆ.

ಕೋವಿಡ್-19ನ್ನು ಸಮರ್ಪಕವಾಗಿ ಎದುರಿಸುವ ನಿಟ್ಟಿನಲ್ಲಿ ಎಲ್ಲರೂ ಮಾಸ್ಕ್‌ಗಳನ್ನು ಹಾಕಿಕೊಳ್ಳಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಎಲ್ಲರೂ ಲಸಿಕೆಯನ್ನು ತಪ್ಪದೇ ಹಾಕಿಸಿಕೊಳ್ಳಬೇಕು, ಜನರು ಅನಾವಶ್ಯಕವಾಗಿ ಸಭೆ ಸೇರುವುದು, ಮದುವೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಗ್ರಾಮಗಳಿಂದ ನಗರಕ್ಕೆ ಅವಶ್ಯವಿಲ್ಲದೆ ಬರುವುದು ಇತ್ಯಾದಿಗಳನ್ನು ತಕ್ಷಣಕ್ಕೆ ನಿಲ್ಲಿಸಬೇಕು. ಸೋಂಕಿಗೆ ಒಳಪಟ್ಟವರು ತಮ್ಮ ತಮ್ಮ ಮನೆಗಳಲ್ಲೇ ಇದ್ದು ಇತರರಿಗೆ ಸೋಂಕು ಹರಡದಂತೆ ಎಚ್ಚರಿಕೆಯ ಕ್ರಮ ವಹಿಸಬೇಕು.

ಈಗ ದಾವಣಗೆರೆ ಜಿಲ್ಲೆಯಲ್ಲಿ ಮದುವೆ ಮತ್ತು ನಾಡಹಬ್ಬಗಳ ಸಮಯವಾಗಿದ್ದು, ಅಂತಹ ಸಂದರ್ಭದಲ್ಲಿ ಜನರು ಸರ್ಕಾರದ ಕೋವಿಡ್ 19 ನಿಯಮಾವಳಿಗಳನ್ನು ಅಚ್ಚುಕಟ್ಟಾಗಿ ಪಾಲಿಸಿ, ಸೋಂಕು ನಿಯಂತ್ರಣಕ್ಕೆ ಸಹಕರಿಸಬೇಕು.

ಸಾರ್ವಜನಿಕರು ತಮ್ಮ ಮನೆಗಳಲ್ಲಿ ಅಥವಾ ಬೇರೆ ಯಾವುದೇ ಸ್ಥಳಗಳಲ್ಲಿ ಕಾಲ ಕಾಲಕ್ಕೆ ಸಾಬೂನಿನಿಂದ ಕೈಗಳನ್ನು ಸ್ವಚ್ಛ ಮಾಡಿಕೊಳ್ಳಬೇಕು.

ಸ್ಯಾನಿಟೈಸರ್‌ಗಳನ್ನು ಬಳಸಬೇಕು ಹಾಗೂ ಸೋಂಕಿನ ಲಕ್ಷಣಗಳು ಕಂಡುಬಂದಲ್ಲಿ ಕಾಲ ವಿಳಂಬ ಮಾಡದೇ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಪಟ್ಟು ಆ ಬಗ್ಗೆ ಖಾತ್ರಿಪಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕು ಎಂದವರು ಕರೆ ನೀಡಿದ್ದಾರೆ.

ಅಗತ್ಯವಿಲ್ಲದ ಪ್ರಕರಣಗಳಲ್ಲಿ ಕಕ್ಷಿದಾರರು ನ್ಯಾಯಾಲಯಕ್ಕೆ ಹಾಜರಾಗುವ ಅವಶ್ಯಕತೆ ಇಲ್ಲ ಎಂದು ಮಾನ್ಯ ಉಚ್ಚ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ.

ಆ ನಿಟ್ಟಿನಲ್ಲಿ ತೀರ ಅತ್ಯಗತ್ಯವಿದ್ದ ಪ್ರಕರಣಗಳಲ್ಲಿ ಮಾತ್ರ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ ಗೀತಾ ಹಾಗೂ ಪ್ರಾಧಿಕಾರದ ಪ್ರಭಾರ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ತಿಳಿಸಿದ್ದಾರೆ.

# ಪರಿಹಾರ ಕೊಡಿಸುವ ನೆಪದಲ್ಲಿ ಕಾರ್ಮಿಕರಿಂದ ಹಣ ವಸೂಲಿ : ಕ್ರಮಕ್ಕೆ ಆಗ್ರಹ

ದಾವಣಗೆರೆ, ಮೇ 3- ಕೋವಿಡ್‌ನಿಂದ ಹೈರಾಣಾಗಿರುವ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಪರಿಹಾರ ಕೊಡಿಸುವುದಾಗಿ ಹೇಳಿ ಹಣ ವಸೂಲಿ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘವು ಒತ್ತಾಯಿಸಿದೆ.

ಕಟ್ಟಡ ನಿರ್ಮಾಣ ಕಾರ್ಮಿಕರು ಹಾಗೂ ಇತರೆ ಅಸಂಘಟಿತ ವಲಯದಲ್ಲಿ ಬರುವ ಬೀದಿ ಬದಿ ವ್ಯಾಪಾರಿಗಳು, ಆಟೋರಿಕ್ಷಾ, ಮ್ಯಾಕ್ಸಿಕ್ಯಾಬ್ ಚಾಲಕರು, ಹಮಾಲರು, ಟೈಲರ್, ಕ್ಷೌರಿಕರು, ಮಡಿವಾಳರು, ಗುತ್ತಿಗೆ ಕಾರ್ಮಿಕರು ಸೇರಿದಂತೆ ಸಂಕಷ್ಟದಲ್ಲಿ ಇರುವ ಸಮಯವನ್ನೇ ಕೆಲ ಕಿಡಿಗೇಡಿಗಳು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತ ಪಡಿಸಿದೆ.

ಇಂತಹ ಕಾರ್ಮಿಕರಿಗೆ, ಶ್ರಮಿಕರಿಗೆ ಕೆಲವರು ಕಾರ್ಮಿಕ ಇಲಾಖೆಯಿಂದ ನಾವುಗಳೇ ಕೋವಿಡ್ 19ರ ಸಹಾಯಧನವಾಗಿ 20 ಸಾವಿರ ರೂ.ಗಳನ್ನು ಕೊಡಿಸುವುದಾಗಿ ಹೇಳಿ, ಅಮಾಯಕ ಕಾರ್ಮಿಕರಿಂದ ಹಣ ವಸೂಲಿ ಮಾಡುತ್ತಿದ್ದಾರೆಂಬ ಮಾಹಿತಿ ಲಭ್ಯವಿದ್ದು, ದುಷ್ಟ ವ್ಯಕ್ತಿಗಳ ವಿರುದ್ಧ ಕಾರ್ಮಿಕ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳುವಂತೆ ಸಂಘಟನೆಯ ಜಿಲ್ಲಾಧ್ಯಕ್ಷ ವಿ.ಲಕ್ಷ್ಮಣ್ ಹಾಗೂ ಪ್ರಧಾನ ಕಾರ್ಯದರ್ಶಿ ಹೆಚ್. ಜಿ.ಉಮೇಶ್ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ 1.11 ಲಕ್ಷ ಕಾರ್ಮಿಕರಿಗೆ ಕಾರ್ಮಿಕ ಇಲಾಖೆ ಗುರುತಿನ ಚೀಟಿ ನೀಡಿದೆ. ಅದರಲ್ಲೂ ಸುಮಾರು 60 ಸಾವಿರ ಕಾರ್ಡ್‌ಗಳು ನಕಲಿಯಾಗಿವೆ. ಕಾರಣ ಇಲಾಖೆ ನಕಲಿ ಕಾರ್ಡ್‌ಗಳನ್ನು ತಡೆಗಟ್ಟಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಕಾರ್ಡ್ ನೀಡುವಂತೆ ಈಗಾಗಲೇ ಹಲವಾರು ಬಾರಿ ಕಾರ್ಮಿಕ ಇಲಾಖೆಗೆ ಮನವಿ ಮಾಡಿದ್ದರೂ ಸಹ ಪ್ರಯೋಜನವಾಗಿಲ್ಲ. ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಇದಲ್ಲದೇ ಬೋಗಸ್ ಕಾರ್ಡ್‌ಗಳನ್ನು ನೀಡುತ್ತಿರುವ ಏಜೆನ್ಸಿಗಳನ್ನು ಪತ್ತೆ ಹಚ್ಚಿ ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈಗಾಗಲೇ ಅರ್ಜಿ ಸಲ್ಲಿಸಿರುವ ಕಾರ್ಮಿಕರು ಗುರುತಿನ ಚೀಟಿಗಳನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಸಂಘಟನೆಯ ಜಿಲ್ಲಾಧ್ಯಕ್ಷ ವಿ.ಲಕ್ಷ್ಮಣ್ (9945394590), ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಉಮೇಶ್, (99019 83886), ಕಚೇರಿಯ ದೂ. ಸಂಖ್ಯೆ 08192-230969ಗೆ ಸಂಪರ್ಕಿಸಬಹುದು.

# ಆರೋಗ್ಯದ ಹಿತದೃಷ್ಟಿಯಿಂದ ಬಿಸಿ ನೀರಿನ ಹಬೆ



**ಹರಿಹರ**

ಹರಿಹರ, ಮೇ 3- ನಗರದಲ್ಲಿ ದಿನೇ ದಿನೇ ಕೊರೊನಾ ರೋಗದ ಹರಡುವಿಕೆಯ ಪ್ರಮಾಣ ಹೆಚ್ಚಾಗಿರುವುದರಿಂದ ಪೊಲೀಸ್ ಇಲಾಖೆ ಸಿಬ್ಬಂದಿಗಳು ಹಗಲು, ರಾತ್ರಿ ವೇಳೆಯಲ್ಲಿ ಸಾರ್ವಜನಿಕರ ಮಧ್ಯದಲ್ಲಿ ಕರ್ತವ್ಯ ಮಾಡುತ್ತಿರುತ್ತಾರೆ. ಅವರ ರಕ್ಷಣೆಗೆ ಬಿಸಿ ನೀರಿನ ಹವೆ ತೆಗೆದುಕೊಂಡು ಸುರಕ್ಷಿತ ಜೀವನ ನಡೆಸಲು ಅನುಕೂಲ ಕಲ್ಪಿಸಲಾಗಿದೆ ಎಂದು ಸಿಪಿಐ ಸತೀಶ್‌ಕುಮಾರ್ ಹೇಳಿದರು.

ನಗರದ ವೃತ್ತ ಕಚೇರಿಯಲ್ಲಿ ಪೊಲೀಸ್ ಸಿಬ್ಬಂದಿಗಳ ಆರೋಗ್ಯ ದೃಷ್ಟಿಯಿಂದ ಅವರಿಗೆ ಕುಕ್ಕರ್ ಮೂಲಕ ಬಿಸಿ ನೀರಿನ ಹವೆ ತೆಗೆದುಕೊಳ್ಳುವ ವ್ಯವಸ್ಥೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ನಗರದಲ್ಲಿ ಕೊರೊನಾ ರೋಗವು ಮೊದಲಿಗಿಂತ ಈ ಬಾರಿ ಹರಡುವಿಕೆ ಪ್ರಮಾಣ ಹೆಚ್ಚಾಗಿರುವುದರಿಂದ ಇದನ್ನು ತಡೆಗಟ್ಟುವ ದೃಷ್ಟಿಯಿಂದ ನಮ್ಮ ಇಲಾಖೆಯ ಸಿಬ್ಬಂದಿಗಳು ಹಗಲು, ರಾತ್ರಿ ವೇಳೆಯಲ್ಲಿ ಸಾರ್ವಜನಿಕರ ಒಳಿತಿಗಾಗಿ ಶ್ರಮವಹಿಸಿ ಕೆಲಸ ಮಾಡುವುದರಿಂದ ಅವರ ಆರೋಗ್ಯಕ್ಕೆ ಯಾವುದೇ ರೀತಿಯ ತೊಂದರೆ ಬರಬಾರದು ಎನ್ನುವ ದೃಷ್ಟಿಯಿಂದ ಹಾಗೂ ಸಿಬ್ಬಂದಿಗಳ ಆರೋಗ್ಯದಲ್ಲಿ ತೊಂದರೆ ಆದರೆ ಅವರ ಕುಟುಂಬದ ಸದಸ್ಯರು ಸಹ ಚಿಂತೆಗೀಡಾಗುತ್ತಾರೆ. ಇದರಿಂದಾಗಿ ಸಿಬ್ಬಂದಿಗಳ ರಕ್ಷಣೆಗೆ ನಮ್ಮ ವೃತ್ತ ಕಚೇರಿಯಲ್ಲಿ ಒಟ್ಟಿಗೆ ನಾಲ್ಕು ಸಿಬ್ಬಂದಿಗಳು ಕುಳಿತುಕೊಂಡು ಕುಕ್ಕರ್ ಮೂಲಕ ನೀರಿನ ಹವೆ ತೆಗೆದುಕೊಂಡು ಕರ್ತವ್ಯವನ್ನು ಮಾಡುವುದಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದಾಗಿ ಸಿಬ್ಬಂದಿಗಳು ಆರೋಗ್ಯವಾಗಿ ಇರುತ್ತಾರೆ ಮತ್ತು ಅವರ ಕುಟುಂಬದ ಸದಸ್ಯರು ನೆಮ್ಮದಿಯಿಂದಿರಲು ದಾರಿಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪಿಎಸ್ಐ ಸುನೀಲ್, ಬಸವರಾಜ್ ತೆಲಿ, ಕ್ರೈಮ್ ಪಿಎಸ್ಐ ಲತಾ ತಾವಳೇಕರ್ ಸಿಬ್ಬಂದಿಗಳಾದ ಸತೀಶ್, ನಾಗರಾಜ್ ಸುಣಗಾರ್, ಮಂಜುನಾಥ್, ಸಂತೋಷ್, ಯಾಸೀನ್ ಉಲ್ಲಾ, ಸುಜಾತ, ಅಕ್ಕಮ್ಮ ಇತರರು ಹಾಜರಿದ್ದರು.

## ಮಳೆ - ಗಾಳಿಗೆ ನೆಲಕ್ಕೆ ಬಿದ್ದ ಕಮಾನು

ಹರಿಹರ, ಮೇ 3- ನಗರದಲ್ಲಿ ಸಂಜೆ ಬಿದ್ದ ಮಳೆ ಹಾಗೂ ಗಾಳಿಗೆ ಹರಪನಹಳ್ಳಿ ರಸ್ತೆಯ ಚಿಂತಾಮಣಿ ಬಡಾವಣೆಯ ಶ್ರೀ ಗಣೇಶ ದೇವಸ್ಥಾನದ ಹತ್ತಿರದಲ್ಲಿ ಇರುವ ಸ್ವಾಗತ ಕಮಾನು ನೆಲಕ್ಕೆ ಬಿದ್ದಿದೆ. ಲಾಕ್‌ಡೌನ್‌ನಿಂದ ವಾಹನಗಳ ಓಡಾಟ ಕಡಿಮೆ ಇರುವುದರಿಂದ ಯಾವುದೇ ರೀತಿಯ ಸಾವು, ನೋವುಗಳು ಸಂಭವಿಸಿರುವುದಿಲ್ಲ. ಕಮಾನು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದರಿಂದಾಗಿ ಸ್ವಲ್ಪ ಸಮಯದವರೆಗೆ ಈ ಭಾಗದಲ್ಲಿ ವಾಹನ ಸವಾರರಿಗೆ ತೊಂದರೆಯಾಯಿತು. ನಂತರ ಸ್ಥಳೀಯ ನಿವಾಸಿಗಳು ಕಮಾನನ್ನು ರಸ್ತೆ ಪಕ್ಕಕ್ಕೆ ಸರಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ಆಂಜನೇಯ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ 12.30 ರವರೆಗೆ ವಿದ್ಯುತ್ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## 33ನೇ ವಾರ್ಡಿನಲ್ಲಿ ಕಾರ್ಮಿಕರ ದಿನಾಚರಣೆ



ದಾವಣಗೆರೆ, ಮೇ 3 - 33ನೇ ವಾರ್ಡಿನಲ್ಲಿ ಕಾರ್ಮಿಕರ ದಿನಾಚರಣೆಯನ್ನು ಪೌರ ಕಾರ್ಮಿಕರ ಜೊತೆಗೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಎಲ್ಲಾ ಪೌರ ಕಾರ್ಮಿಕರು ಕೆಲಸದ ವೇಳೆ ದಿನನಿತ್ಯ ಗ್ಲಾಸ್, ಸ್ಯಾನಿಟೈಸರ್ ಮಾಸ್ಕ್ ಉಪಯೋಗಿಸಬೇಕು. ಆಗ ಪೌರ ಕಾರ್ಮಿಕರು ಸುರಕ್ಷಿತ ವಾಗಿರುತ್ತಾರೆ ಎಂದು ಹೇಳಿದರು.

33 ನೇ ವಾರ್ಡಿನ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್ ಮಾತನಾಡಿ, ಪೌರ ಕಾರ್ಮಿಕರು ಪೌಷ್ಟಿಕ ಆಹಾರದಿಂದ ಮುಖಾಂತರ ಕೊರೊನಾ ವಿರುದ್ಧ ಹೋರಾಡಬಹುದು.

33 ಮತ್ತು 34 ನೇ ವಾರ್ಡಿನಲ್ಲಿ ಕಾರ್ಮಿಕರ ಕೊರತೆ ಇದೆ. ಎರಡು ವಾರ್ಡಿಗೆ ಐದು ಜನ ಪೌರ ಕಾರ್ಮಿಕರ ಅವಶ್ಯಕತೆ ಇದೆ. ಆದಕಾರಣ ಪೌರಕಾರ್ಮಿಕರನ್ನು ಕೊಡಬೇಕಾಗಿ ಮೇಯರ್ ವೀರೇಶ್ ಅವರಲ್ಲಿ ಮನವಿ ಮಾಡಿದರು.

| 10 | ಹನುಮಂತಪ್ಪ ಬಿನ್ ಹನುಮಂತಪ್ಪ | 42/8 | - | - | 00-04-00 | |
| 11 | ಮಲ್ಲೇಶಪ್ಪ ಬಿನ್ ಬಸಪ್ಪ ಗೌಡ, ಪಾರ್ವತಮ್ಮ ಕೋಂ<br>ಸಣ್ಣವೀರಪ್ಪ, ಜಿ ಚಂದ್ರಪ್ಪ ಬಿನ್ ಜಿ ಹಾಲಪ್ಪ<br>ಶಾಂತಮ್ಮ ಕೋಂ ಕಾಂತರಾಜು | 42/1 | - | - | 00-04-08 | |
| 12 | ನಾಗರಾಜಪ್ಪ ಬಿನ್ ಬಸಪ್ಪ ಗೌಡ | 42/10 | 47 | 00-03-04 | 00-02-08 | |
| 13 | ಮಲ್ಲೇಶಪ್ಪ ಬಿನ್ ಬಸಪ್ಪ ಗೌಡ, ಪಾರ್ವತಮ್ಮ ಕೋಂ<br>ಸಣ್ಣವೀರಪ್ಪ, ಜಿ ಚಂದ್ರಪ್ಪ ಬಿನ್ ಜಿ ಹಾಲಪ್ಪ<br>ಶಾಂತಮ್ಮ ಕೋಂ ಕಾಂತರಾಜು | 42/1 | - | - | 00-07-12 | |
| 14 | ಮೀನಾಕ್ಷಮ್ಮ ಕೋಂ ಎಂ. ಜಿ. ರುದ್ರಪ್ಪ | 42/6 | - | - | 00-26-08 | |
| | ಮಲ್ಲೇಶಪ್ಪ ಬಿನ್ ಬಸಪ್ಪ ಗೌಡ,<br>ಪಾರ್ವತಮ್ಮ ಕೋಂ ಸಣ್ಣವೀರಪ್ಪ,<br>ಜಿ ಚಂದ್ರಪ್ಪ ಬಿನ್ ಜಿ ಹಾಲಪ್ಪ<br>ಶಾಂತಮ್ಮ ಕೋಂ ಕಾಂತರಾಜು | 42/1 | 48 | 00-03-04 | 00-14-08 | |
| 15 | ಮೀನಾಕ್ಷಮ್ಮ ಕೋಂ ಎಂ ಜಿ ರುದ್ರಪ್ಪ | 42/7 | | - | 00-05-04 | |
| 16 | ಸಿದ್ದಪ್ಪ ಟಿ.ವಿ ಬಿನ್ ಟಿ ವೀರಪ್ಪ,<br>ಮಹದೇವಪ್ಪ ಟಿ.ವಿ. ಬಿನ್ ಟಿ ವೀರಪ್ಪ<br>ಮಂಜಪ್ಪ ಟಿ.ವಿ ಬಿನ್ ಟಿ ವೀರಪ್ಪ<br>ಲತಾ ಟಿ.ಎಸ್ ಕೋಂ ಶೇಖರಪ್ಪ ಟಿ.ವಿ. | 41 | 49 | 00-03-04 | 00-03-12 | ಸದರಿ ರಿ.ಸ.ನಂ. ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆಗಾಗಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿದೆ |
| | | **ಒಟ್ಟು** | **7** | **00-22-12** | **07-06-00** | |

**ಎಲೆಕ್ಟ್ರಿಕಲ್ ಕಾಯ್ದೆ 2003 ರ ಭಾಗ 8 ಕಲಂ 67-68 ರಂತೆ ಸದರಿ ಯೋಜನೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಉಪವಿಭಾಗಾಧಿಕಾರಿಗಳು ದಾವಣಗೆರೆ ಉಪವಿಭಾಗ ದಾವಣಗೆರೆ, ಇವರ ಕಛೇರಿಗೆ ಮೇಲ್ಕಂಡ ಗ್ರಾಮಗಳ ಸರ್ವೆ ನಂಬರ್‌ಗಳ ಮಾಲೀಕರು ಈ ಪತ್ರಿಕಾ ಪ್ರಕಟಣೆ ಪ್ರಕಟವಾದ 07 ದಿನಗಳ ಒಳಗಾಗಿ ಲಿಖಿತವಾಗಿ ಸಲ್ಲಿಸಲು ಕೋರಿದೆ.**

**ಸಹಿ/-**
**ಉಪವಿಭಾಗಾಧಿಕಾರಿ,**
**ದಾವಣಗೆರೆ ಉಪವಿಭಾಗ, ದಾವಣಗೆರೆ.**

# ಆಕ್ಸಿಜನ್ ಎಕ್ಸ್‌ಪ್ರೆಸ್‌ಗಾಗಿ ರೈಲ್ವೆಗೆ ರಾಜ್ಯದ ಪತ್ರ

**(1ನೇ ಪುಟದಿಂದ)** ಹೊತ್ತೊಯ್ಯುವ ಆಕ್ಸಿಜನ್ ವಿಶೇಷ ರೈಲುಗಳ ಕಾರ್ಯಾರಂಭಕ್ಕೆ ರೈಲ್ವೆ ಮಂಡಳಿ ಮುಖ್ಯಸ್ಥ ಸುನೀತ್ ಶರ್ಮಾ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದೆ.

ಗ್ರೀನ್ ಚಾನೆಲ್ ಮೂಲಕ ಸಮಯಕ್ಕೆ ಸರಿಯಾಗಿ ಆಕ್ಸಿಜನ್ ತಲುಪಿಸಲು ವಿಶೇಷ ಆಕ್ಸಿಜನ್ ರೈಲುಗಳ ಓಡಾಟ ಅಗತ್ಯವಿರುತ್ತದೆ. ಈ ರೈಲುಗಳ ಚಲನೆ ಮೇಲೆ ನಿಗಾ ವಹಿಸಲು ರೈಲ್ವೆ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸಬೇಕಾಗುತ್ತದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ. ರಾಜ್ಯ ಸರ್ಕಾರದ ಈ ಮನವಿಗೆ ನೈರುತ್ಯ ರೈಲ್ವೆ ವಲಯ ಜನರಲ್ ಮ್ಯಾನೇಜರ್ ಗಜಾನನ್ ಮಲ್ಯ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬೆಂಗಳೂರು ರೈಲ್ವೆ ವಿಭಾಗದ ಕೋವಿಡ್- ಕೇರ್ ಸೆಂಟರ್ ಗಳು ಹಾಗೂ ವಿಭಾಗೀಯ ರೈಲ್ವೆ ಆಸ್ಪತ್ರೆಗಳಲ್ಲಿ ಯಾವುದೇ ಆಕ್ಸಿಜನ್ ಕೊರತೆಯಾಗಿಲ್ಲ. 2 ಸಾವಿರ ಲೀಟರ್ ಸಾಮರ್ಥ್ಯದ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್ ಸ್ಥಾಪಿಸುವುದಾಗಿ ರೈಲ್ವೆ ವಿಭಾಗೀಯ ಪ್ರಕಟಣೆಯಲ್ಲಿ ತಿಳಿಸಿದೆ.

# ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಒಂದೇ ಪರಿಹಾರವಲ್ಲ

ದಾವಣಗೆರೆ, ಮೇ 3- ಕೊರೊನಾ ನಿಯಂತ್ರಣಕ್ಕೆ ಲಾಕ್‌ಡೌನ್ ಒಂದೇ ಪರಿಹಾರವಲ್ಲ. ಬದಲಾಗಿ ಎಲ್ಲರಿಗೂ ಲಸಿಕೆ ಕೊಡಿಸುವುದು ಶಾಶ್ವತ ಪರಿಹಾರವಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ವಿಫಲವಾಗಿದೆ ಎಂದು ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಜನರಿಗೆ ಲಸಿಕೆ ಕೊಡಿಸುವಲ್ಲಿ ಜಿಲ್ಲಾಡಳಿತ ವಿಫಲವಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ ಅವರ ನಿರ್ಲಕ್ಷ್ಯತನ ಕೂಡ ಕಾರಣವಾಗಿದೆ ಎಂದು ದೂರಿದರು.

ಆರೋಗ್ಯ ಕೇಂದ್ರಗಳ ಮುಂದೆ ವಯೋವೃದ್ದರು, ಹಿರಿಯ ನಾಗರಿಕರು ಲಸಿಕೆಗಾಗಿ ಸರದಿ ಸಾಲಿನಲ್ಲಿ ಬೆಳಿಗ್ಗೆಯಿಂದಲೇ ನಿಲ್ಲುತ್ತಾರೆ. 1ರ ನಂತರ ಲಸಿಕೆ ಖಾಲಿಯಾಗಿದೆ ಎಂದು ವೈದ್ಯರು ಹೇಳುತ್ತಾರೆ. ಇದರಿಂದ ನೂರಾರು ಜನ ವಾಪಾಸ್ ಹೋಗುವ ಸನ್ನಿವೇಶವನ್ನು ಪ್ರತಿದಿನ ನೋಡುತ್ತಿದ್ದೇವೆ ಎಂದರು.

## ಸಿಜಿ ಆಸ್ಪತ್ರೆಯಲ್ಲಿ ವೆಂಟಿಲೇಟರ್ ನಿರ್ವಹಣೆ ಸಮರ್ಪಕವಾಗಿಲ್ಲ



ಜಿಲ್ಲಾಸ್ಪತ್ರೆಯಲ್ಲಿ ವೆಂಟಿಲೇಟರ್‌ಗಳ ನಿರ್ವಹಣೆ ಸಮರ್ಪಕವಾಗಿಲ್ಲ. ಲಸಿಕೆ ಕೂಡ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ ಎಂದು ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ದೂರಿದರು. ಜಿಲ್ಲೆಯಲ್ಲಿ ವ್ಯಾಪಕವಾಗಿ ಸಮಸ್ಯೆಗಳು ಉಲ್ಬಣಗೊಂಡಿದ್ದರೂ ಸಂಸದ ಜಿ.ಎಂ.ಸಿದ್ದೇಶ್ವರ ಅವರಿಗೆ ಜನರ ಬಗ್ಗೆ ಕಾಳಜಿ ಇಲ್ಲವಾಗಿದೆ ಎಂದು ಆರೋಪಿಸಿದರು. ಜಿಲ್ಲೆಗೆ ಪ್ರತಿದಿನ 13 ಸಾವಿರ ಡೋಸ್ ಲಸಿಕೆ ಪೂರೈಸುವ ಅಗತ್ಯವಿದೆ. ಜಿಲ್ಲಾಸ್ಪತ್ರೆಯಲ್ಲಿ 41 ವೆಂಟಿಲೇಟರ್‌ಗಳಿದ್ದು, ಅದರಲ್ಲಿ 21 ವೆಂಟಿಲೇಟರ್‌ಗಳು ಕಾರ್ಯನಿರ್ವಹಿಸುತ್ತೇವೆ. ಇದನ್ನು ಪ್ರಶ್ನಿಸಿದರೆ, ಸ್ಟ್ಯಾಂಡ್ ಬೈ ಇಟ್ಟಿಕೊಂಡಿರುವುದಾಗಿ ಅಧಿಕಾರಿಗಳು ಹೇಳುತ್ತಾರೆ ಎಂದರು.

ಸರ್ಕಾರದ ಮಾರ್ಗ ಸೂಚಿಯಂತೆ ಯಾರಿಗೆ ಲಸಿಕೆ ನೀಡಬೇಕೆಂಬುದನ್ನು ಸ್ಪಷ್ಟಪಡಿಸಿದ್ದು, ಅದರಂತೆ ಅಂಥವರನ್ನೇ ಲಸಿಕೆ ಹಾಕಿಸಿಕೊಳ್ಳುವಂತೆ ಪ್ರೇರೇಪಿಸಲಾಗಿದೆ. ಅದರಂತೆ ನಮ್ಮ ಮೇಲೆ ವಿಶ್ವಾಸವಿಟ್ಟು ಲಸಿಕೆ ಹಾಕಿಸಿಕೊಳ್ಳಲು ಮುಂದಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಲಸಿಕೆ ಇಲ್ಲ ಎಂದು ಹೇಳುವುದು ಎಷ್ಟು ಸಮಂಜಸ? ಎಂದು ನಾಗರಾಜ್ ಪ್ರಶ್ನಿಸಿದ್ದಾರೆ.

ಮೇ 1 ರಿಂದ 18 ರಿಂದ 44ರ ವಯೋಮಾನದವರಿಗೆ ಲಸಿಕೆ ಪಡೆಯಲು ಆನ್‌ಲೈನ್ ನೋಂದಣಿಗೆ ಸರ್ಕಾರ ಕರೆ ಕೊಟ್ಟಿದೆ. ಈಗಾಗಲೇ ದೇಶದಲ್ಲಿ ಒಂದು ಕೋಟಿಗೂ ಅಧಿಕ ನೋಂದಣಿ ಆಗಿದೆ. ನಗರದಲ್ಲೂ ಕೂಡ ನೋಂದಣಿ ಪ್ರಕ್ರಿಯೆ ನಡೆದಿದೆ. ಅವರಿಗೂ ಲಸಿಕಾ ಕೇಂದ್ರಗಳನ್ನು ತೆರೆಯಬೇಕಾಗಿದೆ. ಅವಶ್ಯ ಮಾಹಿತಿ ನೀಡಿ, ಅಲೆದಾಟ ತಪ್ಪಿಸಿ ಎಂದು ಮನವಿ ಮಾಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ಚಮನ್ ಸಾಬ್, ಗಡಿಗುಡಾಳ್ ಮಂಜುನಾಥ್, ಅಬ್ದುಲ್ ಲತೀಫ್, ಗಣೇಶ್ ಹುಲ್ಮನಿ, ಇಟ್ಟಿಗುಡಿ ಮಂಜುನಾಥ್ ಇದ್ದರು.

# ಬಿಟ್ಟು ಹೋಗಿ : ಡಿಕೆಶಿ ತರಾಟೆ

**(1ನೇ ಪುಟದಿಂದ)** ಮೇಲ್ವಿಚಾರಣೆ ಮಾಡುತ್ತಿಲ್ಲ. ನಮ್ಮ ಶಾಸಕರು, ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕು ಎಂದು ಹೇಳಿದ್ದರು. ಅವರಿಗೆ ಮುಖ್ಯಮಂತ್ರಿಗಳು ಸಮಯಾವಕಾಶ ಕೊಟ್ಟಿದ್ದಾರೋ, ಇಲ್ಲವೋ ಗೊತ್ತಿಲ್ಲ. ಈ ಸರ್ಕಾರದಿಂದಾಗಲೀ ಮುಖ್ಯಮಂತ್ರಿಗಳಿಂದಾಗಲೀ, ಮಂತ್ರಿಗಳಿಂದಾಗಲೀ ಈ ಪರಿಸ್ಥಿತಿ ನಿಭಾಯಿಸಲು ಆಗುತ್ತಿಲ್ಲ. ಅವರ ಆದ್ಯತೆಗಳೇ ಬೇರೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ನಮ್ಮ ಮರ್ಯಾದೆ ಹೋದರೂ ಪರವಾಗಿಲ್ಲ, ಶಾಸಕಾಂಗ ಪಕ್ಷದ ಸಭೆ ನಂತರ ನಾನೇ ಮುಖ್ಯಕಾರ್ಯದರ್ಶಿಗಳ ಸಮಾಯಾವಕಾಶ ಕೇಳಿ ಅವರು ಎಲ್ಲಿರುತ್ತಾರೋ, ಅಲ್ಲಿಗೇ ಹೋಗಿ ಭೇಟಿ ಮಾಡಿ ಈ ರಾಜ್ಯದ ಜನತೆಗೆ ವಾಸ್ತವಾಂಶ ಏನಿದೆ ಎಂದು ತಿಳಿಸಲು ಕೇಳಿಕೊಳ್ಳುತ್ತೇನೆ ಎಂದವರು ಹೇಳಿದ್ದಾರೆ.

ನನಗೆ ಬರುತ್ತಿರುವ ಕರೆಗಳನ್ನು ಸ್ವೀಕರಿಸಲು ನನಗೆ ಸಾಧ್ಯವಾಗುತ್ತಿಲ್ಲ. ಅವರನ್ನು ಎಲ್ಲಿಗೆ ಕಳುಹಿಸಬೇಕು, ಯಾರನ್ನು ಸಂಪರ್ಕಿಸಬೇಕು ಎಂಬುದು ತೋಚುತ್ತಿಲ್ಲ. ಜನ ಆಕ್ಸಿಜನ್ ಮಟ್ಟದ ಕುಸಿತದಿಂದ ಆತಂಕಕ್ಕೆ ಸಿಲುಕಿದ್ದಾರೆ. ನಮಗೆ ಮುಖ್ಯಕಾರ್ಯದರ್ಶಿಗಳು, ಆರೋಗ್ಯ ಇಲಾಖೆ ಕಾರ್ಯದರ್ಶಿಗಳ ಬದ್ಧತೆ ಬಗ್ಗೆ ಪ್ರಶ್ನೆ ಇಲ್ಲ. ಆದರೆ ಜನರಿಗೆ ವಾಸ್ತವಾಂಶವನ್ನು ನೀವಾದರೂ ತಿಳಿಸಿ. ತಜ್ಞರು ಎಂದು ಇಟ್ಟುಕೊಂಡಿರುವವರು ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ನಿಮ್ಮ ಕೈಯ್ಯಲ್ಲಿ ಪರಿಸ್ಥಿತಿ ನಿಭಾಯಿಸಲು ಆಗದಿದ್ದರೆ ಅಧಿಕಾರ ಬಿಟ್ಟು ಹೋಗಿ ಎಂದವರು ಆಗ್ರಹಿಸಿದ್ದಾರೆ.

# 'ಉದ್ಯೋಗ ಖಾತ್ರಿ ಯೋಜನೆ'

**(1ನೇ ಪುಟದಿಂದ)** ತೊಡಗಿಕೊಂಡಿದ್ದಾರೆ. ಕೆಲವರು ತಮ್ಮದೇ ಜಮೀನಿನಲ್ಲಿ ಬದು ನಿರ್ಮಾಣ ಕಾಮಗಾರಿ ಕೈಗೊಂಡರೆ, ಇನ್ನೂ ಕೆಲವರು ಬೇರೆ ರೈತರು ತಮ್ಮ ಜಮೀನಿನಲ್ಲಿ ಕೈಗೊಂಡ ಕೆಲಸಕ್ಕೆ ಹಾಜರಾಗುತ್ತಿದ್ದಾರೆಂದು ಕೃಷಿ ಇಲಾಖೆಯ ಮೇಟಿ ಶಿವರಾಜ್ ಹೇಳುತ್ತಾರೆ.

ಬೇಸಿಗೆಯ ಸಂದರ್ಭದಲ್ಲಿ ಕೆಲಸವಿಲ್ಲದ ಕಾರ್ಮಿಕರಿಗೆ ಕೃಷಿ ಇಲಾಖೆ ಕೈಗೊಂಡಿರುವ ಉದ್ಯೋಗ ಖಾತ್ರಿ ಯೋಜನೆ ಕಾಮಗಾರಿಗಳು ತುಂಬಾ ಅನುಕೂಲವಾಗಿವೆ. ಪ್ರಸ್ತುತ ಉದ್ಯೋಗ ಖಾತ್ರಿ ನಿಯಮದಂತೆ ಪ್ರತಿ ಕಾರ್ಮಿಕರಿಗೆ ದಿನಕ್ಕೆ 289 ರೂಪಾಯಿ ಕೂಲಿ ಸಿಗಲಿದೆ. ವಾರಕ್ಕೊಮ್ಮೆ ಅವರ ಖಾತೆಗೆ ಜಮಾ ಮಾಡಲಾಗುತ್ತಿದೆ.

ತಾಲ್ಲೂಕಿನ ಹಿರೇಮಲ್ಲನಹೊಳೆ, ಕ್ಯಾಸೇನಹಳ್ಳಿ, ಅಣಬೂರು ಮತ್ತು ದೊಣ್ಣೆಹಳ್ಳಿ ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಏಪ್ರಿಲ್ ತಿಂಗಳಿಂದ ಸುಮಾರು 219 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, 4500 ಮಾನವ ದಿನಗಳು ಸೃಷ್ಟಿಯಾಗಿವೆ ಎನ್ನುತ್ತಾರೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು.

ಗ್ರಾಮೀಣ ಪ್ರದೇಶದಲ್ಲಿ ಸದ್ಯಕ್ಕೆ ಕೃಷಿ ಚಟುವಟಿಕೆಗಳು ಇಲ್ಲದ ಕಾರಣ ಕಾರ್ಮಿಕರು ರೈತಾಪಿ ಜನರು ತಮ್ಮ ಜಮೀನುಗಳಲ್ಲಿ ಅಂತರ್ಜಲಕ್ಕೆ ಸಂಬಂಧಿ ಸಿದ ಕಾಮಗಾರಿಗಳು ಕೈಗೊಳ್ಳುವ ಮೂಲಕ ಲಾಕ್‌ಡೌನ್ ಸಂದರ್ಭದಲ್ಲೂ ಕೆಲಸ ಸಿಕ್ಕಿದಂತಾಗಿದೆ. ಕೆಲಸಕ್ಕಾಗಿ ಗುಳೇ ಹೋಗುವ ಸಂದರ್ಭವೂ ಇಲ್ಲದ ಈ ಸಮಯದಲ್ಲಿ ಉದ್ಯೋಗ ಖಾತ್ರಿ ಯೋಜನೆ ಜನರಿಗೆ ನೆರವಾಗಿದೆ.

# ನೀಟ್ - ಪಿಜಿ ಮುಂದೂಡಿಕೆ

**(1ನೇ ಪುಟದಿಂದ)** ವೈದ್ಯಕೀಯ ಇಂಟರ್ನ್‌ಗಳು ತಮ್ಮ ಬೋಧಕರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಇದು ಹಾಲಿ ಕೊರೊನಾ ಕಾರ್ಯದಲ್ಲಿ ತೊಡಗಿರುವವರ ಮೇಲಿನ ಒತ್ತಡ ಕಡಿಮೆ ಮಾಡಲಾಗಿದೆ.

ಬಿ.ಎಸ್.ಸಿ. ಇಲ್ಲವೇ ಜಿ.ಎನ್.ಎಂ. ಅರ್ಹತೆ ಪಡೆದಿರುವ ನರ್ಸ್‌ಗಳನ್ನು ಪೂರ್ಣಕಾಲಿಕವಾಗಿ ಕೊರೊನಾ ನರ್ಸಿಂಗ್ ಕರ್ತವ್ಯದಲ್ಲಿ ನಿಯೋಜಿಸಲಾಗುವುದು. ಮುಂದಿನ ದಿನಗಳಲ್ಲಿ ಇವರಿಗೂ ಸಹ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುವುದು. ಈ ಎಲ್ಲರಿಗೂ ಸೂಕ್ತ ಲಸಿಕೆಯನ್ನೂ ನೀಡಲಾಗುವುದು. ಈ ಎಲ್ಲ ವೃತ್ತಿಪರರು ಸರ್ಕಾರದ ಮುಂಚೂಣಿ ಕಾರ್ಯಕರ್ತರ ವಿಮೆ ಯೋಜನೆಗೆ ಒಳಪಡಲಿದ್ದಾರೆ.

ನೀಟ್ - ಪಿ.ಜಿ. ಪರೀಕ್ಷೆಯನ್ನು ನಾಲ್ಕು ತಿಂಗಳ ಕಾಲ ಮುಂದೂಡಿರುವುದರಿಂದ, ಆಗಸ್ಟ್ 31ಕ್ಕೆ ಮುಂಚೆ ಪರೀಕ್ಷೆ ನಡೆಯುವ ಸಾಧ್ಯತೆ ಇಲ್ಲದಂತಾಗಿದೆ. ಪರೀಕ್ಷೆಯ ದಿನದ ಕನಿಷ್ಠ ಒಂದು ತಿಂಗಳ ಮುಂಚೆ ದಿನಾಂಕ ಘೋಷಣೆ ಮಾಡಲಾಗುವುದು ಎಂದು ತಿಳಿಸಲಾಗಿದೆ.

# ಜಜಮು ಕಾಲೇಜಿಗೆ ದಾಖಲೆಯ ಫಲಿತಾಂಶ



ಅನುಷಾ ಎಸ್.



ಅನುಷಾ ದೇವಿ ಆರ್.



ಅರ್ಪಿತ್ ಹೆಚ್.ಎಸ್.




ಮಿನರ್ವ ಆರ್.



ಸಮರನ್ ಕಾಶಿರೆಡ್ಡಿ



ಸಂಜಯ್ ಆರ್.



ಅಮಿತ್ ಬಿ.



ಮೌನ ಎಸ್.

**(1ನೇ ಪುಟದಿಂದ)** 9 ವಿದ್ಯಾರ್ಥಿಗಳು ಶ್ರೇಷ್ಠ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಒಟ್ಟಾರೆ 246 ವಿದ್ಯಾರ್ಥಿಗಳು ಅಂತಿಮ ಎಂಬಿಬಿಎಸ್‌ನ ಪರೀಕ್ಷೆ ತೆಗೆದುಕೊಂಡಿದ್ದು, ಅದರಲ್ಲಿ 232 ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗುವುದರೊಂದಿಗೆ ಒಟ್ಟಾರೆ 94% ಫಲಿತಾಂಶ ಸಾಧಿಸಿದ್ದಾರೆ. ಇದರಲ್ಲಿ ಅತಿ ಹೆಚ್ಚು ಡಿಸ್ಟಿಂಕ್ಷನ್ 9, 175 ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುವುದು ಗಮನಾರ್ಹ.

ಫಲಿತಾಂಶದ ಬಗ್ಗೆ ಕಾಲೇಜಿನ ಛೇರ್ಮನ್ ಹಾಗೂ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಅವರು ವಿದ್ಯಾರ್ಥಿಗಳಿಗೆ, ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸುತ್ತಾ, ಈ ಫಲಿತಾಂಶ ನಮ್ಮ ಜ.ಜ.ಮು ವೈದ್ಯಕೀಯ ಕಾಲೇಜಿನಲ್ಲಿ ಕೊಡುವ ಉತ್ತಮ ಹಾಗೂ ಶ್ರೇಷ್ಠ ಮಟ್ಟದ ಬೋಧನೆ, ಉತ್ತಮ ಸೌಲಭ್ಯ ಮತ್ತು ಸಿಗುತ್ತಿರುವ ಅವಕಾಶಗಳೇ ಕಾರಣ. ಎಲ್ಲಾ ತೇರ್ಗಡೆಯಾಗಿ ಡಾಕ್ಟರ್ ಪದವಿ ಪಡೆದ ವಿದ್ಯಾರ್ಥಿಗಳು ನಿಷ್ಠೆಯಿಂದ ಸೇವೆ ಮಾಡಿ, ಒಳ್ಳೆಯ ಹೆಸರನ್ನು ಪಡೆಯುವಂತೆ ಶುಭ ಹಾರೈಸಿದ್ದಾರೆ.

ಬಾಪೂಜಿ ಆಸ್ಪತ್ರೆಯ ಛೇರ್ಮನ್ ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು, ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆ ಹೇಳುತ್ತಾ, ಈ ಒಂದು ವಿಷಮ ಸ್ಥಿತಿಯಲ್ಲಿ ಇಂತಹ ಒಳ್ಳೆಯ ಫಲಿತಾಂಶವನ್ನು ತಂದದ್ದು ತುಂಬಾ ಸಂತೋಷವಾದ ವಿಷಯ. ಈ ಒಂದು ಮಹಾಮಾರಿಯನ್ನು ಹೊಡೆದೊಡಿಸಲು ನಿಮ್ಮ ಕರ್ತವ್ಯ ಹೆಚ್ಚಿನ ಆದ್ಯತೆ ವಹಿಸಲಿ ಎಂದು ಕರೆ ನೀಡಿದ್ದಾರೆ.

## 69 ಡಿಸ್ಟಿಂಕ್ಷನ್

ಕಾಲೇಜಿನ ಪ್ರಾಂಶುಪಾಲ ಡಾ|| ಎಸ್. ಬಿ.ಮುರುಗೇಶ್ ಅವರು, ವಿದ್ಯಾರ್ಥಿಗಳಿಗೆ ಸಿಹಿ ಹಂಚಿ, ವೈದ್ಯಕೀಯ ವಿಭಾಗದಲ್ಲಿ ಇನ್ನೂ ಉನ್ನತ ಮಟ್ಟಕ್ಕೆ ಏರಿ ಹೆಚ್ಚಿನ ಸಂಶೋಧನೆ ನಡೆಸಿ, ಯಾವುದೇ ರೋಗ ಬಂದರೂ ಅದನ್ನು ಬಡಿದೊಡಿಸಲು ಸದಾ ಸಿದ್ಧರಾಗಿರಿ, ನಿಮ್ಮ ವೃತ್ತಿಗೆ ನ್ಯಾಯ ಹಾಗೂ ವೃತ್ತಿಯ ಗೌರವ ಕಾಪಾಡುವಂತೆ ಆಶಯ ವ್ಯಕ್ತಪಡಿಸಿದ್ದಾರೆ.

**ಫಲಿತಾಂಶದ ವಿವರ :** ಎಸ್.ಪಿ.ಶ್ರೇಯ (ಡಾ|| ಎಸ್.ಎಸ್.ಪ್ರಕಾಶ್ ಹಾಗೂ ಡಾ|| ಜಿ.ವಿ.ಕವಿತಾ ಅವರ ಪುತ್ರಿ) 1390 ಅಂಕ ಪಡೆದು, (ಶೇ.79.43) ಕಾಲೇಜಿಗೆ ಪ್ರಥಮ ಸ್ಥಾನ.

ಎಸ್.ಎನ್.ಅನುಷ (ಡಾ|| ಎ.ಆರ್. ಹನುಮಂತಪ್ಪ ಹಾಗೂ ಶ್ರೀಮತಿ ಜಿ.ಸಿ.ಸುಧಾ ಅವರ ಪುತ್ರಿ) 1374 (ಶೇ. 78.51).

ಆರ್.ಅನುಷಾ ದೇವಿ (ಕೆ.ಎಸ್.ರಾಮಕೃಷ್ಣ ಗೌಡ ಹಾಗೂ ಶ್ರೀಮತಿ ವೀಣಾ ಗೌಡ ಅವರ ಪುತ್ರಿ) 1373 (ಶೇ.78.46)

ಹೆಚ್.ಎಸ್.ಅರ್ಪಿತ (ಡಾ|| ಡಬ್ಲ್ಯೂ. ಬಿ.ಶಿವಕುಮಾರ್ ಹಾಗೂ ಶ್ರೀಮತಿ ಬಿ.ಕೆ.ಭಾರತಿ ಅವರ ಪುತ್ರಿ) 1351 (ಶೇ.77.20)

ಮಿನರ್ವ ಪಿ. ಬಹದ್ದೂರ್‌ಘಟ್ಟೆ (ಬಿ.ಸಿ.ರವಿ ಹಾಗೂ ಶ್ರೀಮತಿ ಬಿ.ಆರ್.ಸುನೀತಾ ಅವರ ಪುತ್ರಿ) 1340 (ಶೇ.76.57)

ಸಮರ್ನ್ ಕಾಸಿರೆಡ್ಡಿ, 1335 (ಶೇ.76.29)

ಸಂಜಯ್ ಆರ್.ಅಲಿಗರ್, 1331 (ಶೇ.76.06)

ಬಿ. ಅಮಿತ್, 1316 (ಶೇ.75.20)

ಎಸ್.ಮೌನ, 1313 (ಶೇ.75.03)

# ನಿರ್ದಾಕ್ಷಿಣ್ಯ ಕ್ರಮಕ್ಕೆ ಸಿಎಂ ಎಚ್ಚರಿಕೆ

**(1ನೇ ಪುಟದಿಂದ)** ಸುಧಾಕರ್ ಅವರಿಂದ ಸಂಪೂರ್ಣ ಮಾಹಿತಿ ಪಡೆದಿರುವ ಮುಖ್ಯಮಂತ್ರಿ, ತಕ್ಷಣವೇ ಚಾಮರಾಜನಗರ ಜಿಲ್ಲೆಗೆ ತೆರಳುವಂತೆ ಸೂಚಿಸಿದ್ದಾರೆ. ಘಟನೆಗೆ ಏನು ಕಾರಣ, ಆಮ್ಲಜನಕ ಕೊರತೆ ಸೃಷ್ಟಿಯಾಗಿದ್ದು ಹೇಗೆ? ಎರಡೂ ಜಿಲ್ಲೆಗಳ ನಡುವೆ ಸಮನ್ವಯತೆ ಇರಲಿಲ್ಲವೇ ಎನ್ನುವ ಕುರಿತು ಸಮಾಲೋಚನೆ ನಡೆಸಿದರು.

ಈ ವೇಳೆ ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಆಮ್ಲಜನಕ ಪೂರೈಕೆ ಮಾಡುವ ಏಜೆನ್ಸಿಗೆ ಮೌಖಿಕ ಸೂಚನೆ ನೀಡಿ ಚಾಮರಾಜನಗರಕ್ಕೆ ಆಮ್ಲಜನಕ ಪೂರೈಕೆ ಮಾಡದಂತೆ ತಿಳಿಸಿದ್ದರು ಎನ್ನಲಾಗಿದೆ.

ನಿನ್ನೆ ರಾತ್ರಿ 12.30ರವರೆಗೂ ಮೈಸೂರಿನಿಂದ ಚಾಮರಾಜನಗರಕ್ಕೆ ಒಟ್ಟು 250 ಆಕ್ಸಿಜನ್ ಸಿಲಿಂಡರ್‌ಗಳನ್ನು ಕಳುಹಿಸಲಾಗಿದೆ. ಆಕ್ಸಿಜನ್ ಲಿಕ್ವಿಡ್ ಬಳ್ಳಾರಿಯಿಂದ ಚಾಮರಾಜನಗರಕ್ಕೆ ಬರಬೇಕಿತ್ತು. ಅದು ಸರಿಯಾದ ಸಮಯದಲ್ಲಿ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಈ ವಿಚಾರದಲ್ಲಿ ಮೈಸೂರು ಜಿಲ್ಲಾಡಳಿತ ವಿಳಂಬ ಮಾಡಿಲ್ಲ. ನಾವು ಅಧಿಕೃತವಾಗಿ 250 ಆಕ್ಸಿಜನ್ ಸಿಲಿಂಡರ್‌ಗಳನ್ನು ನಿನ್ನೆ ಮಧ್ಯರಾತ್ರಿಯ ವೇಳೆಗೆ ಕಳಿಸಿದ್ದೇವೆ. ಇದಕ್ಕೆ ದಾಖಲೆ ಇದೆ ಎಂದು ಜಿಲ್ಲಾಧಿಕಾರಿ ಮುಖ್ಯಮಂತ್ರಿಗೆ ತಿಳಿಸಿದ್ದಾರೆ.

ಹೀಗೆ ಜಿಲ್ಲಾಡಳಿತ ಸಮರ್ಥನೆ ಮಾಡಿಕೊಳ್ಳಲು ಮುಂದಾಗುತ್ತಿದ್ದಂತೆ, ಕೆಂಡಮಂಡಲರಾದ ಮುಖ್ಯಮಂತ್ರಿ, ತನಿಖಾ ವರದಿ ಬಂದ ನಂತರ ಮಾತನಾಡುವೆ ಎಂದು ಆ ಆಕ್ರೋಶದಲ್ಲೇ ದೂರವಾಣಿ ಕರೆಯನ್ನು ಕಡಿತ ಮಾಡಿದರು ಎಂದು ಗೊತ್ತಾಗಿದೆ. ಇದನ್ನೆಲ್ಲಾ ನಂತರ ನೋಡೋಣ, ಮೊದಲು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ನಿಭಾಯಿಸಿ ಎಂದು ಸಿಎಂ ಯಡಿಯೂರಪ್ಪ ಸಚಿವ ಸುಧಾಕರ್ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಸುರೇಶ್‌ಕುಮಾರ್ ಅವರಿಗೆ ಸೂಚಿಸಿದ್ದಾರೆ.

ಸಿಎಂ ಭೇಟಿ ನಂತರ ಮಾತನಾಡಿದ ಸಚಿವ ಸುಧಾಕರ್, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ನಡುವೆ ಸಮನ್ವಯತೆ ಕೊರತೆಯಿಂದ ಆಮ್ಲಜನಕ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿರಬಹುದು. ಈ ಹೊಂದಾಣಿಕೆಯ ನ್ಯೂನತೆ ಸರಿಪಡಿಸುವ ಕೆಲಸ ಮಾಡುತ್ತೇವೆ. ಚಾಮರಾಜನಗರಕ್ಕೆ ಹೋಗಿ ಸ್ಪಷ್ಟ ಮಾಹಿತಿ ನೀಡುತ್ತೇನೆ ಎಂದರು.

# ಕೊರೊನಾ : ಲಘು ಲಕ್ಷಣಕ್ಕೆ ಸಿಟಿ ಸ್ಕ್ಯಾನ್ ಬೇಡ

ನವದೆಹಲಿ, ಮೇ 3 – ಲಕ್ಷಣ ರಹಿತರು ಹಾಗೂ ಲಘು ಲಕ್ಷಣಗಳ ಕೊರೊನಾ ಹೊಂದಿರುವವರು ಸಿ.ಟಿ. ಸ್ಕ್ಯಾನ್‌ಗೆ ಒಳಗಾಗದಂತೆ ಎ.ಐ.ಐ.ಎಂ.ಎಸ್ ನಿರ್ದೇಶಕ ಡಾ. ರಣದೀಪ್ ಗುಲೇರಿಯಾ ತಿಳಿಸಿದ್ದು, ಒಂದು ಸಿ.ಟಿ. ಸ್ಕ್ಯಾನ್ 300-400 ಎದೆಯ ಎಕ್ಸ್‌ರೇಗಳಿಗೆ ಸಮ ಎಂದು ಎಚ್ಚರಿಸಿದ್ದಾರೆ.

## ಒಂದು ಸಿ.ಟಿ. ಸ್ಕ್ಯಾನ್ 400 ಎಕ್ಸ್‌ರೇಗಳಿಗೆ ಸಮ, ಕ್ಯಾನ್ಸರ್ ಅಪಾಯ : ಗುಲೇರಿಯ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಲಕ್ಷಣ ರಹಿತ ಕೊರೊನಾ ಸೋಂಕಿತರು ಸಿ.ಟಿ. ಸ್ಕ್ಯಾನ್ ಮಾಡಿಸಿದಾಗ ಕಂಡು ಬರುವ ಪ್ಯಾಚ್‌ಗಳು ಕೆಲವೇ ದಿನಗಳಲ್ಲಿ ಯಾವುದೇ ಚಿಕಿತ್ಸೆ ಇಲ್ಲದೇ ಗುಣವಾಗುತ್ತವೆ ಎಂದು ಹೇಳಿದ್ದಾರೆ. ಮತ್ತೊಂದೆಡೆ ಸಿ.ಟಿ. ಸ್ಕ್ಯಾನ್ 300-400 ಎಕ್ಸ್-ರೇಗಳಿಗೆ ಸಮ. ಪದೇ ಪದೇ ಸಿ.ಟಿ. ಸ್ಕ್ಯಾನ್ ಮಾಡಿಸುವುದರಿಂದ ಯುವಕರಲ್ಲಿ ಕ್ಯಾನ್ಸರ್ ಅಪಾಯ ಹೆಚ್ಚಾಗುತ್ತದೆ ಎಂದು ಗುಲೇರಿಯಾ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಅಣು ಶಕ್ತಿ ಆಯೋಗದ ವರದಿಯನ್ನು ಉಲ್ಲೇಖಿಸಿರುವ ಅವರು, ಪದೇ ಪದೇ ಸಿ.ಟಿ. ಸ್ಕ್ಯಾನ್ ಮಾಡಿಸಿದಾಗ, ಅದರಲ್ಲೂ ಯುವಕರಲ್ಲಿ ಸ್ಕ್ಯಾನ್ ಮಾಡಿಸಿದಾಗ ನಂತರದಲ್ಲಿ ಕ್ಯಾನ್ಸರ್ ಅಪಾಯ ಹೆಚ್ಚಾಗುತ್ತದೆ ಎಂದಿದ್ದಾರೆ.

ಲಘು ಲಕ್ಷಣಗಳಿರುವ ಕಡೆಗಳಲ್ಲಿ ಸ್ಕ್ಯಾನ್ ಅಗತ್ಯವಿರುವುದಿಲ್ಲ. ಕೊರೊನಾ ಟೆಸ್ಟ್ ಪಾಸಿಟಿವ್ ಬಂದ ತಕ್ಷಣ ಸಿ.ಟಿ .ಸ್ಕ್ಯಾನ್ ಮಾಡಿಸಿಕೊಳ್ಳಬೇಕು ಎಂದು ಹಲವರು ಭಾವಿಸಿದ್ದಾರೆ. ಆದರೆ, ಅಧ್ಯಯನಗಳ ಪ್ರಕಾರ ಲಕ್ಷಣ ರಹಿತರು ಸಿ.ಟಿ. ಸ್ಕ್ಯಾನ್‌ಗೆ ಒಳಗಾದಾಗ ಕಂಡು ಬರುವ ಪ್ಯಾಚ್‌ಗಳು ಯಾವುದೇ ಚಿಕಿತ್ಸೆ ಇಲ್ಲದೇ ಗುಣವಾಗುತ್ತವೆ ಎಂದಿದ್ದಾರೆ. ಸಿ.ಆರ್.ಪಿ., ಡಿ - ಡೈಮರ್, ಎಲ್. ಡಿ.ಹೆಚ್, ಫೆರಿಟಿನ್ ಮುಂತಾದ ಬಯೋ ಮಾರ್ಕರ್‌ಗಳ ಬಗ್ಗೆಯೂ ಮಾತಾಡಿರುವ ಅವರು, ಲಘು ಲಕ್ಷಣಗಳಿದ್ದರೆ ಈ ಮಾಹಿತಿಯಿಂದ ಯಾವುದೇ ಪ್ರಯೋಜವಿಲ್ಲ ಎಂದಿದ್ದಾರೆ.

ದೇಹದಲ್ಲಿ ಗಾಯ ಸೇರಿದಂತೆ ಯಾವುದೇ ತೊಂದರೆಯಾದರೂ ಈ ಬಯೋಮಾರ್ಕರ್‌ಗಳು ಹೆಚ್ಚಾಗುತ್ತವೆ. ಇವುಗಳಿಂದ ವೈರಲ್ ರೋಗ ಪತ್ತೆ ಮಾಡಲು ಪ್ರಯೋಜನವಾಗದು ಎಂದು ಹೇಳಿದ್ದಾರೆ.

# ಆಕ್ಸಿಜನ್ ಕೊರತೆ : 24 ಸಾವು

**(1ನೇ ಪುಟದಿಂದ)** 12ರಿಂದ 3 ಗಂಟೆವರೆಗೆ ಮೂವರು ಸಾವನ್ನಪ್ಪಿದ್ದಾರೆ. ಮುಂಜಾನೆ 3 ಗಂಟೆಯಿಂದ 7 ಗಂಟೆಯವರೆಗೆ 7 ಜನ ಸಾವನ್ನಪ್ಪಿದ್ದು, 24 ಗಂಟೆಯಲ್ಲಿ 23 ಜನರು ಮೃತಪಟ್ಟಿದ್ದಾರೆ ಎಂದಿದ್ದಾರೆ.

ಆರೋಗ್ಯ ಸಚಿವ ಡಾ. ಸುಧಾಕರ್, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡ ಯಡಿಯೂರಪ್ಪ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾಧಿಕಾರಿಗಳನ್ನು ಸಂಪರ್ಕಕ್ಕೆ ತೆಗೆದುಕೊಂಡು ತೀವ್ರ ತರಾಟೆಗೆ ತೆಗೆದುಕೊಂಡರು.

ಈ ಘಟನೆ ಬಗ್ಗೆ ಟ್ವೀಟ್ ಮಾಡಿರುವ ಮುಖ್ಯಮಂತ್ರಿಯವರು ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಪ್ರಕರಣದ ಬಗ್ಗೆ ವರದಿ ಬರುತ್ತಿದ್ದಂತೆ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಘಟನೆಯನ್ನು ಖಂಡಿಸಿರುವ ಪ್ರತಿಪಕ್ಷಗಳು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಡಾ. ಸುಧಾಕರ್ ಅವರ ರಾಜೀನಾಮೆಗೆ ಒತ್ತಾಯಿಸಿವೆ.

ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತ್ಯೇಕ ಹೇಳಿಕೆಗಳನ್ನು ನೀಡಿ, ಸರ್ಕಾರದ ನಿರ್ಲಕ್ಷ್ಯದಿಂದ ಈ ಘಟನೆ ನಡೆದಿದೆ. ಇದರ ಜವಾಬ್ದಾರಿಯನ್ನು ಮುಖ್ಯಮಂತ್ರಿಯವರೇ ಹೊರಬೇಕು ಎಂದು ಹೇಳಿದ್ದಾರೆ.

ತಜ್ಞರು ನೀಡಿರುವ ವರದಿಯನ್ನು ಕಡೆಗಣಿಸಿದ್ದಕ್ಕೆ ಜನ ಹಾದಿ ಬೀದಿಯಲ್ಲಿ ಸಾಯುವಂತಾಗಿದೆ ಎಂದು ಕಿಡಿಕಾರಿರುವ ಕುಮಾರಸ್ವಾಮಿ, ಇಂತಹ ಸರ್ಕಾರ ನಮಗೆ ಬೇಕೇ ಎಂದಿದ್ದಾರೆ.

ಮತ್ತೊಂದೆಡೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಘಟನೆಯ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆಯಾಗಬೇಕು. ವರದಿ ಬರುವವರೆಗೆ ತಮ್ಮ ಸ್ಥಾನಗಳಿಂದ ಕೆಳಗಿಳಿಯಬೇಕೆಂದು ಆಗ್ರಹಿಸಿದ್ದಾರೆ.

# ಐದು ರಾಜ್ಯಗಳ ಫಲಿತಾಂಶ ರೈತರ ಗೆಲುವಾಗಿದೆ

ದಾವಣಗೆರೆ, ಮೇ 3- ಐದು ರಾಜ್ಯಗಳ ಚುನಾವಣಾ ಫಲಿತಾಂಶವು ಭಾರತ ದೇಶದ ಕಾರ್ಮಿಕರ, ರೈತರ ಮತ್ತು ಜಾತ್ಯತೀತತೆಯ ಗೆಲುವಾಗಿದೆ ಎಂದು ವಕೀಲ ಅನೀಸ್ ಪಾಶಾ ತಿಳಿಸಿದ್ದಾರೆ. ಜಾತಿ-ಧರ್ಮಗಳನ್ನು ವಿಭಜನೆ ಮಾಡಿ ಅಧಿಕಾರದ ಗದ್ದುಗೆ ಹಿಡಿಯಲು ಸಾಧ್ಯವಿಲ್ಲವೆಂದು ಮತ್ತು ಎಷ್ಟೇ ಶಕ್ತಿಶಾಲಿಯಾಗಿರಲಿ ಕೆಲಸ ಮಾಡಿದವರು ಮಾತ್ರ ಅಧಿಕಾರ ಹಿಡಿಯಲು ಸಾಧ್ಯ ಎಂದು ಅಲ್ಲಿಯ ಜನತೆ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ.

ಈಗಲಾದರೂ ಕೇಂದ್ರ ಸರ್ಕಾರ ಬಂಡವಾಳ ಶಾಹಿಗಳಿಗೆ ಮಣೆ ಹಾಕುವುದನ್ನು ಬಿಟ್ಟು, ರೈತ ವಿರೋಧಿ ಮತ್ತು ಕಾರ್ಮಿಕ ವಿರೋಧಿ ಕಾನೂನುಗಳನ್ನು ರದ್ದುಗೊಳಿಸಿ ದೇಶದ ಏಕತೆ, ಅಖಂಡತೆ, ಸಮಾನತೆ ಮತ್ತು ಬೆಳವಣಿಗೆಯ ಕಡೆಗೆ ಹೆಚ್ಚು ಒತ್ತು ನೀಡಬೇಕೆಂದು ಅವರು ತಿಳಿಸಿದ್ದಾರೆ.

# ಕೋವಿಡ್ ಕಾರ್ಯಪಡೆಗೆ ಅಶ್ವತ್ಥ ನಾರಾಯಣ ಅಧ್ಯಕ್ಷ

ಬೆಂಗಳೂರು, ಮೇ 3 - ರಾಜ್ಯದಲ್ಲಿ ಕೊರೊನಾ ನಿಯಂತ್ರಣ ತಪ್ಪುತ್ತಿರುವ ಹಿನ್ನೆಲೆಯಲ್ಲಿ ಅತ್ಯುನ್ನತ ಮಟ್ಟದ ಸಮಿತಿಯಾದ ಕೋವಿಡ್ ಕಾರ್ಯಪಡೆಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುನರ್‌ರಚಿಸಿ, ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್ ಅವರನ್ನು ಕಾರ್ಯಪಡೆಯ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

# ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ಅಂತೆ, ತಡೆಯಾಜ್ಞೆಯಂತೆ

## ಓದುಗರ ಪತ್ರ

## ಲಕ್ಷಾಂತರ ಶಿಕ್ಷಕರ ಜೀವನದ ಜೊತೆ ಆಟವಾಡುತ್ತಿರುವ ಸರ್ಕಾರ

**ಮಾನ್ಯರೇ,**

ಪ್ರತಿ ವರ್ಷ ಶಿಕ್ಷಕರ ವರ್ಗಾವಣೆಗೆ ಕೌನ್ಸಿಲಿಂಗ್ ದಿನಾಂಕ ಪ್ರಕಟಿಸುವುದು ನಂತರ ತಡೆಯಾಜ್ಞೆ ಎಂದು ಮುಂದೂಡುವುದು, ಇಷ್ಟೆಲ್ಲಾ ಆಗುವ ಸಮಯಕ್ಕೆ ಆ ವರ್ಷ ಮುಗಿದೇ ಹೋಗುತ್ತದೆ. ಕಳೆದ ಸುಮಾರು ವರ್ಷಗಳಿಂದ ಇದೇ ರೀತಿಯಲ್ಲಿಯೇ ನಡೆಯುತ್ತಿರುವುದನ್ನು ನೋಡಿದರೆ, ಸರ್ಕಾರಕ್ಕೆ ಈ ವರ್ಗಾವಣೆಯಿಂದ ಯಾವುದೇ ರೀತಿಯ ಲಾಭ ಇಲ್ಲ. ಆದ್ದರಿಂದ ಅವರು ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎಂಬುದು ಗೊತ್ತಾಗುತ್ತದೆ, ಸರ್ಕಾರದ ಬೇರೆ ಯಾವುದೇ ಇಲಾಖೆಯಲ್ಲಿ ಇರದಂತಹ ವರ್ಗಾವಣೆ ತೊಡಕುಗಳು ಶಿಕ್ಷಣ ಇಲಾಖೆಯಲ್ಲಿ ಇರುವುದು ಮಾತ್ರ ವಿಪರ್ಯಾಸ.

ಕಂದಾಯ, ಪೊಲೀಸ್, ಆರ್‌ಟಿಓ, ಲೋಕೋಪಯೋಗಿ, ನೀರಾವರಿ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಇಲಾಖೆ ಹಾಗು ಇನ್ನಿತರೆ ಸರ್ಕಾರದ ಸಂಪನ್ಮೂಲಭರಿತ ಇಲಾಖೆಗಳಲ್ಲಿ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಯಾವುದೇ ತೊಡಕು ಬರುವುದಿಲ್ಲ. ಆದರೆ ಬಡ ಶಿಕ್ಷಕರ ವರ್ಗಾವಣೆ ಸಂದರ್ಭದಲ್ಲಿ ಮಾತ್ರ ನೂರು ತೊಡಕುಗಳು ಪ್ರತಿವರ್ಷ ಬರುತ್ತವೆ ಎನ್ನುವುದನ್ನು ಗಮನಿಸಿದರೆ, ಇಲ್ಲಿರುವ ಮರ್ಮ ಅರ್ಥವಾಗದೆ ಇರದು.

ಸುಸಂಸ್ಕೃತ ಸಮಾಜವನ್ನು ಕಟ್ಟುವ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಈ ಸರ್ಕಾರ ಸಾಮಾನ್ಯ ವರ್ಗಾವಣೆ ಭಾಗ್ಯವನ್ನು ಕರುಣಿಸದೇ ಇರುವುದನ್ನು ನೋಡಿದರೆ, ಸರ್ಕಾರಗಳಿಗೆ ಗುಣಕ್ಕಿಂತ ಹಣವೇ ಮುಖ್ಯ ಎಂಬಂತೆ ಕಾಣುತ್ತದೆ.

ಸರ್ಕಾರದ ವಿವಿಧ ಇಲಾಖೆಯ ಅಧಿಕಾರಿಗಳು ವರ್ಗಾವಣೆಗೆ ನೀಡುವ ಹಣದ ಮಾಹಿತಿ ನೀಡಬಹುದು. ಆದರೆ ಅದು ಇಲ್ಲಿ ಅಪ್ರಸ್ತುತ, ಸಂಬಳ ಬಿಟ್ಟು ಯಾವುದೇ ರೀತಿಯ ಆದಾಯವಿರದ ಶಿಕ್ಷಕರು ಸರ್ಕಾರವನ್ನು ಸಂತೃಪ್ತ ಪಡಿಸುವುದಾದರೂ ಹೇಗೆ ?

ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ವರ್ಷವಾದರೂ ಬಡ ಶಿಕ್ಷಕರಿಗೆ ವರ್ಗಾವಣೆ ಭಾಗ್ಯ ಕರುಣಿಸುವುದೇ?

**- ಕೆ.ಎಲ್.ಹರೀಶ್ ಬಸಾಪುರ,** ದಾವಣಗೆರೆ.

# ಆನ್‌ಲೈನ್ ಫುಡ್ ಸಪ್ಲೈಯರ್‌ಗಳ ಸ್ವಚ್ಛತೆಗೆ ಆದ್ಯತೆ ನೀಡಿ

**ಮಾನ್ಯರೇ,**

ಸರ್ಕಾರ ಕೋವಿಡ್-19 ಕುರಿತು ನಿಯಮಾವಳಿಗಳನ್ನು ಬಿಡುಗಡೆ ಮಾಡಿರುವುದು ಸರಿಯಷ್ಟೆ, ಹೋಟೆಲ್ ಹಾಗೂ ರೆಸ್ಟೋರೆಂಟ್ ಗಳಲ್ಲಿ ಪಾರ್ಸೆಲ್‌ಗೆ ಅವಕಾಶ ನೀಡಲಾಗಿದೆ, ಇದರನ್ವಯ ಸ್ವಿಗ್ಗಿ ಮತ್ತು ಝೊಮೆಟೋ ಮುಖಾಂತರ ಆಹಾರ ಪದಾರ್ಥಗಳನ್ನು ನಮ್ಮಿಷ್ಟದ ಹೋಟೆಲ್‌ಗಳಿಂದ ನಮ್ಮನಮ್ಮ ಮನೆಗಳಿಗೆ, ಕಚೇರಿಗಳಿಗೆ ತರಿಸಿಕೊಳ್ಳುವುದಕ್ಕೆ ನಿಯಮಾವಳಿಗಳಲ್ಲಿ ಅವಕಾಶವಿದೆ, ಈ ಆಹಾರ ಸರಬರಾಜು ಮಾಡುವ ಸಿಬ್ಬಂದಿ ವರ್ಗದವರು ಧರಿಸಿರುವ ಬಟ್ಟೆಗಳನ್ನು ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳದೆ ಗುಂಪು ಗುಂಪಾಗಿ ಪ್ರತಿಷ್ಠಿತ ಹೋಟೆಲ್ ಹಾಗೂ ರೆಸ್ಟೋರೆಂಟ್ ಮುಂದೆ ಜಮಾಯಿಸಿರುವ ಇವರೂ ಕೂಡ ಕೋವಿಡ್ ಹರಡಲು ಪರೋಕ್ಷವಾಗಿ ಕಾರಣ ಆಗುತ್ತಿದ್ದಾರೆ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ, ಬೇಕಿದ್ದರೆ ಎಂ.ಸಿ.ಸಿ ಕಾಲೋನಿ, ಆಂಜನೇಯ ಬಡಾವಣೆ. ಮತ್ತಿತರೆ ಕಡೆ ಬಂದು ಸಂಬಂಧಿಸಿದ ಅಧಿಕಾರಿ ವರ್ಗದವರು ಪರಿಶೀಲಿಸಿ, ದಂಡ ವಿಧಿಸಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಮನವಿ.

**-ಎಂ. ಕೆ. ಬಕ್ಕಪ್ಪ,** ದಾವಣಗೆರೆ.

# ಕರ್ಫ್ಯೂ: ನಿಗದಿತ ಸಮಯದ ಬಳಿಕ ಅಂಗಡಿಗಳ ಬಂದ್

ದಾವಣಗೆರೆ, ಮೇ 3- ಕೊರೊನಾ ಸೋಂಕು ಹರಡುವಿಕೆ ತಡೆಗಟ್ಟಲು ಸರ್ಕಾರ ವಿಧಿಸಿರುವ ಜನತಾ ಕರ್ಫ್ಯೂ ಹಿನ್ನೆಲೆಯಲ್ಲಿ ನಗರದಲ್ಲಿ ಇಂದು ಅಗತ್ಯ ವಸ್ತುಗಳ ಹೊರತುಪಡಿಸಿ ಉಳಿದೆಲ್ಲಾ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು.

ಈ ಮುನ್ನ ಬೆಳಗ್ಗೆ 10 ಗಂಟೆವರೆಗೆ ನೀಡಲಾಗಿದ್ದ ವ್ಯಾಪಾರ ವಹಿವಾಟಿನ ಸಮಯವನ್ನು ಮಧ್ಯಾಹ್ನ 12 ಗಂಟೆವರೆಗೆ ವಿಸ್ತರಿಸಲಾಗಿದ್ದು, ಅಷ್ಟರೊಳಗಾಗಿ ಸಾರ್ವಜನಿಕರು ತಮ್ಮ ಕೆಲಸ-ಕಾರ್ಯ, ವ್ಯಾಪಾರ- ವಹಿವಾಟು ಮುಗಿಸಿ ನಂತರ ಬಂದ್ ಮಾಡುವುದು ಎಂದಿನಂತೆ ಮುಂದುವರೆದಿದೆ. ಆಯಾ ಠಾಣಾ ವ್ಯಾಪ್ತಿಯ ಪೊಲೀಸರು ಸಹ ತಮ್ಮ ವ್ಯಾಪ್ತಿಯಲ್ಲಿನ ಬಡಾವಣೆಗಳಲ್ಲಿ ಸಂಚರಿಸಿ ಜನರ ಅನಾವಶ್ಯಕ ಓಡಾಟ, ವ್ಯಾಪಾರ ವಹಿವಾಟು ಬಂದ್‌ಗೊಳಿಸಲು ಪ್ರಯತ್ನ ಮುಂದುವರೆಸಿದ್ದಾರೆ.

ಇಂದು ಸಹ ಹಾಲಿನ ಡೈರಿ, ಅಗತ್ಯ ವಸ್ತುಗಳ ಅಂಗಡಿ, ಪೆಟ್ರೋಲ್ ಬಂಕ್ ಗಳು, ಔಷಧಿ ಅಂಗಡಿಗಳು ತೆರೆದಿದ್ದವು. ಉಳಿದೆಲ್ಲಾ ಅವಶ್ಯವಿಲ್ಲದ ಅಂಗಡಿಗಳಿಗೆ ಬೀಗ ಹಾಕಿದ್ದು ಸಾಮಾನ್ಯವಾಗಿತ್ತು. ಕೆಲ ರಸ್ತೆಗಳು ಬಿಕೋ ಎನ್ನುತ್ತಿದ್ದವು. ದ್ವಿಚಕ್ರ ವಾಹನಗಳು, ಕಾರು, ಆಟೋ ಸೇರಿದಂತೆ ಕೆಲ ವಾಹನಗಳ ಓಡಾಟ ಸಹಜವಾಗಿ ಇತ್ತು.

## ಮಾಸ್ಕ್ ಮರೆತ ಜನ: ರಸ್ತೆಗಿಳಿದ ವಾಹನಗಳು

**6 ವಾಹನಗಳ ಜಪ್ತಿ: 2 ಲಕ್ಷಕ್ಕೂ ಅಧಿಕ ಮಾಸ್ಕ್ ದಂಡ:** ವಿನಾಕಾರಣ ಜನತಾ ಕರ್ಫ್ಯೂ ವೇಳೆ ರಸ್ತೆಗಿಳಿದ ವಾಹನಗಳ ಚಾಲಕರು, ಮಾಲೀಕರಿಗೆ ದಂಡ ವಿಧಿಸುವ ಜೊತೆಗೆ ವಾಹನಗಳನ್ನು ಜಪ್ತಿ ಮಾಡುವ ಕಾರ್ಯಾಚರಣೆಯೂ ಎರಡನೇ ದಿನವಾದ ಇಂದೂ ಮುಂದುವರೆದಿತ್ತು.

ಸರ್ಕಾರ, ಜಿಲ್ಲಾಡಳಿತದ ಆದೇಶ ಉಲ್ಲಂಘನೆ, ಕೊರೊನಾ ನಿಯಂತ್ರಣ ಮಾರ್ಗಸೂಚಿ ಉಲ್ಲಂಘಿಸುವವರ ವಿರುದ್ಧ ಕೇಸ್ ದಾಖಲಿಸುವ ಕೆಲಸವೂ ಆಗುತ್ತಿದೆ. ಪೊಲೀಸರು ಸಹ ದಂಡ ವಿಧಿಸಿ ನಿಯಮ ಪಾಲಿಸಲು ಬಿಸಿ ಮುಟ್ಟಿಸಿದ ರಾದರೂ ಮೊದಲ ದಿನದ ಕರ್ಫ್ಯೂ ನಂತರ ವಾಹನಗಳು ರಸ್ತೆಗಿಳಿಯುವುದು ತಪ್ಪಿಲ್ಲ. ಅಲ್ಲದೇ ತಮ್ಮ ಜೀವ ರಕ್ಷಣೆಗೆ ಮಾಸ್ಕ್ ಧರಿಸದ ಜನರಿಗೆ ದಂಡ ವಿಧಿಸುವ ಕಾರ್ಯವೂ ನಿರಂತರವಾಗಿದೆ.

ಜಿಲ್ಲೆಯಲ್ಲಿ ಮಾಸ್ಕ್ ಧರಿಸದ ಒಟ್ಟು 1331 ಪ್ರಕರಣಗಳನ್ನು ದಾಖಲಿಸಿ, 2,37,800 ರೂ. ದಂಡ ವಸೂಲಿ ಮಾಡಲಾಗಿದೆ. ಅನಾವಶ್ಯಕವಾಗಿ ಸುತ್ತಾಡುತ್ತಿದ್ದ 6 ವಾಹನಗಳನ್ನು ಜಪ್ತಿ ಮಾಡಲಾಗಿದೆ. ಆದೇಶ ಉಲ್ಲಂಘಿಸಿದ ಹಿನ್ನೆಲೆಯಲ್ಲಿ 12 ಕೆಇಡಿ ಕಾಯ್ದೆ ಕೇಸ್‌ಗಳನ್ನು ಜಿಲ್ಲೆಯಲ್ಲಿ ದಾಖಲಿಸಲಾಗಿದೆ.

# ಬಡವರ ಬ್ಯಾಂಕ್ ಖಾತೆಗೆ 25 ಸಾವಿರ ರೂ. ಜಮೆ ಮಾಡಿ

ದಾವಣಗೆರೆ, ಮೇ 3- ಕೊರೊನಾ ನಿಯಂತ್ರಿಸಲು ಸರ್ಕಾರ ಹೇರಿರುವ ಜನತಾ ಕರ್ಫ್ಯೂನಿಂದಾಗಿ ಬಡ ಜನರು ತೀವ್ರ ಸಂಕಷ್ಟಕ್ಕೀಡಾಗಿದ್ದು, ಅವರ ಬ್ಯಾಂಕ್ ಖಾತೆಗೆ 25 ಸಾವಿರ ರೂ. ಜಮೆ ಮಾಡುವ ಮೂಲಕ ಬಡ ಜನರ ನೆರವಿಗೆ ಧಾವಿಸಬೇಕೆಂದು ಬಹುಜನ ಸಮಾಜ ಪಾರ್ಟಿಯ ರಾಜ್ಯ ಕಾರ್ಯದರ್ಶಿ ಹೆಚ್.ಮಲ್ಲೇಶ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಪೂರ್ವ ತಯಾರಿ ಇಲ್ಲದೇ ಜನತಾ ಕರ್ಫ್ಯೂ ಜಾರಿಯಲ್ಲಿರುವುದರಿಂದ ಕೂಲಿ ಕಾರ್ಮಿಕರು, ಫುಟ್‌ಪಾತ್ ವ್ಯಾಪಾರಿಗಳು, ವಾಹನಗಳ ಚಾಲಕರು, ಟೈಲರ್‌ಗಳು, ಕ್ಷೌರಿಕರು, ಮಡಿವಾಳರು, ಹೋಟೆಲ್ ಕಾರ್ಮಿಕರು ಸಂಕಷ್ಟ ಸ್ಥಿತಿಯಲ್ಲಿದ್ದು, ಜೀವನ ದುಸ್ತರವಾಗಿದೆ ಎಂದರು.

ಬಿಎಸ್ಪಿ ಜಿಲ್ಲಾಧ್ಯಕ್ಷ ಡಿ.ಹನುಮಂತಪ್ಪ ಮಾತನಾಡಿ, ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಹೊರ ಗುತ್ತಿಗೆ ಹಾಗೂ ದಿನಗೂಲಿ ನೌಕರರು, ಕೊರೊನಾ ನಿಯಂತ್ರಣಕ್ಕಾಗಿ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಕೊರೊನಾ ವಾರಿಯರ್ಸ್ ಎಂಬ ಪ್ರಶಂಸೆ ಬಿಟ್ಟರೆ, ಮತ್ತೇನೂ ಸಿಗದು ಎಂದು ಹೇಳಿದರು. ಈ ನೌಕರರಿಗೆ ಪೂರ್ಣ ಪ್ರಮಾಣದ ಸಂಬಳ ಕೊಡಿಸುವಲ್ಲಿ ಜಿಲ್ಲಾಡಳಿತ ಮುಂದಾಗಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಎಸ್ಪಿ ತಾಲ್ಲೂಕು ಅಧ್ಯಕ್ಷ ಮಹಮ್ಮದ್ ಕಲೀಂ ಉಪಸ್ಥಿತರಿದ್ದರು.







## ಹೊತ್ತಿ ಉರಿಯುವಾಗ. !!!!

ಹಲೋ ಅಂಕಲ್ ನೋಡಿದ್ರಾ! ಈ ಕೊರೊನಾ ಕಾಲದಲ್ಲೂ ನಮ್ಮ ಇಂಡಿಯಾದಲ್ಲಿ ಚುನಾವಣೆನಾ ಸಕ್ಸಸ್ ಫುಲ್ ಆಗಿ ಮಾಡಿದ್ದೇವೆ.

**ಹೌದಪ್ಪಾ, ಇಂಡಿಯಾ ಈಸ್ ಗ್ರೇಟ್!**

ನಮ್ಮದೇಶದ ಬಗ್ಗೆ ಹೆಮ್ಮೆ ಅನಿಸುತ್ತೆ. ರಾಜಕೀಯ, ಧಾರ್ಮಿಕ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಚಾಣಾಕ್ಷ ಮುಖಂಡರಿದ್ದಾರೆ. ಹೋರಾಟ, ಪ್ರತಿಭಟನೆಗಳಲ್ಲಿ ಜೋರಾಗಿ ಬಿಸಿ ಮೂಡಿಸುವ ಹೋರಾಟಗಾರರೂ ಇದ್ದಾರೆ. ಜನರೂ ಅಷ್ಟೇ. ಆಯಾ ಮುಖಂಡರ ಬೆಂಬಲಕ್ಕೆ ನಿಲ್ತಾರೆ.

**ಸ್ವಲ್ಪ ಬಿಡಿಸಿ ಹೇಳ್ತಿಯಾ?**

ಈಗಾ ದೊಡ್ಡ ದೊಡ್ಡ ಚುನಾವಣಾ Rallyಗಳಲ್ಲಿ ಮೋದಿ, ದೀದಿ, ರಾಹುಲ್ ಗಾಂಧೀ ಮುಂತಾದ ಮುಖಂಡರು ಬಿಂದಾಸ್ ಭಾಗವಹಿಸುತ್ತಾರೆ. ಜನ ಕೊರೊನಾಗೆ ಕೇರ್ ಮಾಡದೇ ಲಕ್ಷಗಟ್ಟಲೇ ಸೇರುತ್ತಾರೆ. ಅದೇ ರೀತಿ ಮೊನ್ನೆ ನಡೆದ ಉಪಚುನಾವಣೆಯಲ್ಲಿ ನಮ್ಮ ರಾಜ್ಯದ ಕಮಲದ, ತೆನೆಹೊತ್ತ ಮತ್ತು ಕೈ ಮುಖಂಡರು ಪ್ರಚಾರದಲ್ಲಿ ತೊಡಗಿ ಕಿಕ್ಕಿರಿದು ಗುಂಪುಗಟ್ಟಿದ ಜನರಿಂದ ಜೈ ಅನ್ನಿಸಿಕೊಂಡರು.

**ಬೇರೆ ಕ್ಷೇತ್ರಗಳಲ್ಲಿ?**

ಅಲ್ಲಿಯೂ ನಮ್ಮ ಜನ ಕೊರೊನಾಗೆ ಡೋಂಟ್ ಕೇರ್. ಲಕ್ಷಗಟ್ಟಲೇ ಸೇರಿ ಕುಂಭ ಮೇಳ ಮಾಡಿದಾರೆ. ಜಾತ್ರೆಗಳನ್ನು ಪಾಲ್ಗೊಂಡಿದಾರೆ. ನಮ್ಮ ರೈತರು ರಾಷ್ಟ್ರಾದ್ಯಂತ ದೊಡ್ಡ ದೊಡ್ಡ ಪ್ರತಿಭಟನೆ ಮಾಡಿದಾರೆ. ಕೆಲವು ಬೇಡಿಕೆಗಳಿಗೆ ಪಾದಯಾತ್ರೆಗಳು ನಡೆದಿವೆ, ಸರ್ಕಾರಿ ನೌಕರರ ಪ್ರತಿಭಟನೆಗಳು ನಡೆದಿವೆ. ಕೆಲ ಸಿನಿಮಾ ಪ್ರಚಾರಗಳೂ ಜೋರಾಗಿ ನಡೆದವು. ನಮ್ಮ ಮದುವೆಗಳು ವಿಜೃಂಭಣೆಯಿಂದ ಆಗಿದಾವೆ. ಯಾವುದೇ ವಿಷಯವಿರಲಿ ನಮ್ಮ ಪಬ್ಲಿಕ್ ಅಂತೂ ಹೆದರಿಕೆಯಿಲ್ಲದೇ ಸೇರ್ತಾರೆ, ಕೂಗಾಡ್ತಾರೆ, ಕೇಕೆ ಆಗ್ತಾರೆ, ಸಂತೆ ಮಾಡ್ತಾರೆ. ಕೊರೊನಾ ಕೇಕೆಗೆ ಹೆದರದೇ ಮುನ್ನುಗ್ಗುವ ನಮ್ಮ ಜನರ ಬಗ್ಗೆ ಹೆಮ್ಮೆ ಅನಿಸುತ್ತೆ. India is great! ಏನಂತೀರಿ?

**ಹೌದಪಾ. ಮೋದಿ, ದೀದಿ, ರಾಹುಲ್ ಗಾಂಧೀ ಮುಂತಾದ ಮುಖಂಡರು, ವಿವಿಧ ಮಠಾಧೀಶರು, ಪ್ರತಿಭಟನಾಕಾರರು ಜೈ ಎನ್ನುವ ಜನ ಜಂಗುಳಿ. ಒಟ್ಟಾರೆಯಾಗಿ ನಮೋ ಜೊತೆಗೆ ನಮ್ಮನ್ನೂ ಸೇರಿ ಒಂದು ಮಾರ್ಮಿಕವಾದ ಮಾತು ನೆನಪಾಗ್ತಿದೆ.**

ಯಾವುದು?

**ರೋಮ್ ಹೊತ್ತಿ ಉರಿಯುವಾಗ....ನೀರೊ ಪಿಟೀಲು ಬಾರಿಸುತ್ತಿದ್ದ!!!**

# ಸಿ.ಟಿ. ಸ್ಕ್ಯಾನ್‌ಗೆ ಹೆಚ್ಚು ಹಣ ಪಡೆದರೆ ಕ್ರಮ : ಡಿಸಿ ಎಚ್ಚರಿಕೆ

ದಾವಣಗೆರೆ, ಮೇ 3 – ಸಿ.ಟಿ. ಸ್ಕ್ಯಾನ್ ಸೆಂಟರ್‌ಗಳು ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಶುಲ್ಕ ಪಡೆದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಎಚ್ಚರಿಸಿದ್ದಾರೆ.

ನಗರದ ಜಿಲ್ಲಾಸ್ಪತ್ರೆಯಲ್ಲಿ ತಜ್ಞ ವೈದ್ಯರು ಹಾಗೂ ಸರ್ಕಾರಿ ಮತ್ತು ಖಾಸಗಿ ಸಿಟಿ ಸ್ಕ್ಯಾನ್ ಮಾಡುವ ತಜ್ಞರೊಂದಿಗೆ ಸಭೆ ನಡೆಸಿದ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಇತ್ತೀಚೆಗೆ ಸಿ.ಟಿ. ಸ್ಕ್ಯಾನ್ ಮೂಲಕ ರೂಪಾಂತರಿ ಕೊರೊನಾ ಪತ್ತೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಿಟಿ ಸ್ಕ್ಯಾನ್ ಸೆಂಟರ್‌ಗಳಲ್ಲಿ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ದರ ಪಡೆಯುತ್ತಿದ್ದಾರೆಂಬ ದೂರುಗಳು ಬಂದಿವೆ. ಯಾವುದೇ ಕಾರಣಕ್ಕೂ ನಿಗದಿತ ದರಕ್ಕಿಂತ ಹೆಚ್ಚಿಗೆ ಪಡೆಯಬಾರದು ಎಂದು ಹೇಳಿದ್ದಾರೆ.

ಸ್ಕ್ಯಾನ್ ಸೆಂಟರ್‌ನ ಫಲಕದಲ್ಲಿ ದರದ ವಿವರವನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದ ಅವರು, ಸಿ.ಟಿ. ಸ್ಕ್ಯಾನ್ ಮಾಡಿಸಿದ ನಂತರ ಕೇವಲ ವರದಿ ಮಾತ್ರ ನೀಡಲಾಗುತ್ತಿದ್ದು ಫಿಲ್ಮ್ ನೀಡುತ್ತಿಲ್ಲ. ಇದರಿಂದ ವೈದ್ಯರು ಮರು ಪರಿಶೀಲನೆ ಮಾಡಲು ಆಗುವುದಿಲ್ಲ. ಆದ ಕಾರಣ ಇನ್ನು ಮುಂದೆ ಫಿಲ್ಮ್



ನೀಡಬೇಕು. ಇದನ್ನು ನಾವು ಸ್ಕ್ಯಾನ್ ಆಡಿಟ್ ಮಾಡಿಸುತ್ತೇವೆ. ಫಿಲಂಗಾಗಿ ಹಣ ಪಡೆಯಬಾರದು ಎಂದರು.

ಸಾಮಾನ್ಯ ಮತ್ತು ಕೋವಿಡ್ ಶಂಕಿತರು ಇಬ್ಬರನ್ನೂ ಒಂದೇ ಸ್ಕ್ಯಾನರ್‌ನಲ್ಲಿ ಪರೀಕ್ಷೆ ಮಾಡುತ್ತಿರುವುದು ಕಂಡು ಬಂದಿದೆ. ಸಿಟಿ ಸ್ಕ್ಯಾನರ್ ಸೂಪರ್ ಸ್ಪ್ರೆಡರ್‌ಗಳಾಗುತ್ತಿದ್ದು, ಒಬ್ಬ ರೋಗಿಗೆ ಸ್ಕ್ಯಾನ್ ಮಾಡಿದ ನಂತರ ಸ್ಕ್ಯಾನರ್ ಅನ್ನು ಸಂಪೂರ್ಣ ಸ್ಯಾನಿಟೈಸ್ ಮಾಡಿ ಮತ್ತೊಬ್ಬರಿಗೆ ಮಾಡಬೇಕು ಹಾಗೂ ಕೋವಿಡ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಕೇಂದ್ರಗಳಲ್ಲಿ ಪಾಲಿಸಬೇಕೆಂದು ಸೂಚನೆ ನೀಡಿದರು.

**ಗರ್ಭಿಣಿಯರಿಗೆ ಪ್ರತ್ಯೇಕ ಆಕ್ಸಿಜನ್ ವಾರ್ಡ್:** ಗರ್ಭಿಣಿಯರೂ ಹೆಚ್ಚಾಗಿ ಕೊರೊನಾಗೆ ಸಿಲುಕುತ್ತಿದ್ದಾರೆ. ಹೀಗಾಗಿ ಗರ್ಭಿಣಿಯರಿಗೆ 10 ಬೆಡ್‌ಗಳ ಪ್ರತ್ಯೇಕ ಆಕ್ಸಿಜನ್ ವಾರ್ಡ್ ರೂಪಿಸಲು ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಬೀಳಗಿ ತಿಳಿಸಿದ್ದಾರೆ.

ಓಬಿಜಿ ವಿಭಾಗದ ತಜ್ಞರಾದ ಡಾ.ಶುಕ್ಲ ಶೆಟ್ಟಿ ಮಾತನಾಡಿ, ಕೊರೊನಾ ವೈರಾಣು ರೂಪಾಂತರ ಪಡೆದ ಹಿನ್ನೆಲೆಯಲ್ಲಿ ಗರ್ಭಿಣಿಯರಿಗೆ ಯಾವ ರೀತಿ ಚಿಕಿತ್ಸೆ ನೀಡಬೇಕೆಂಬ ಬಗ್ಗೆ ನಿರ್ಧರಿಸಲು ವೈದ್ಯರ ಒಂದು ಪ್ಯಾನೆಲ್ ರಚಿಸುವಂತೆ ಕೋರಿದರಲ್ಲದೇ, ಸೋಂಕಿನ ಸಂಭವ ಇರುವುದರಿಂದ ಗರ್ಭಿಣಿಯರು ನಿಯಮಿತ ಪರೀಕ್ಷೆಗೆ ಜಿಲ್ಲಾಸ್ಪತ್ರೆಗೆ ಬರುವುದು ಬೇಡ. ಪಿಹೆಚ್‌ಸಿ, ಹೆರಿಗೆ ಆಸ್ಪತ್ರೆ ಅಥವಾ ಸ್ಥಳೀಯವಾಗಿ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು.

ಸಭೆಯಲ್ಲಿ ವೈದ್ಯರು ಕೋವಿಡ್ ರೋಗಿಗಳನ್ನು ನಿರ್ವಹಿಸಲು ವೈದ್ಯರ ಮತ್ತು ಶುಶ್ರೂಷಕರ ತಂಡಗಳನ್ನು ಹೆಚ್ಚಿಸುವಂತೆ ಹಾಗೂ ವೈದ್ಯರು ಮತ್ತು ಸಿಬ್ಬಂದಿಗಳ ಹೆಚ್ಚುವರಿ ನಿಯೋಜನೆ ಮಾಡುವಂತೆ ಕೋರಿದರು.

ಇದೊಂದು ರಾಷ್ಟ್ರೀಯ ತುರ್ತು ಪರಿಸ್ಥಿತಿಯಾಗಿದ್ದು, ವೈದ್ಯರು ಇಂತಹ ಸಂದರ್ಭದಲ್ಲಿ

**ಜಿಲ್ಲಾ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತ ಗರ್ಭಿಣಿಯರಿಗೆ ಪ್ರತ್ಯೇಕ ಆಕ್ಸಿಜನ್ ವಾರ್ಡ್**

ನಮ್ಮೊಂದಿಗೆ ಕೈಜೋಡಿಸಬೇಕು. ಸಿಟಿ ಸ್ಕ್ಯಾನ್‌ಗೆ ನಿಗದಿತ ದರಕ್ಕಿಂತ ಹೆಚ್ಚಿನ ದರ ಪಡೆಯದೇ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಸಹಕರಿಸಬೇಕು. ಹೆಚ್ಚಿಗೆ ಬಿಲ್ ಮಾಡಿದರೆ ಜನ ಸಾಮಾನ್ಯರಿಗೆ ತೊಂದರೆಯಾಗುವ ಹಿನ್ನೆಲೆಯಲ್ಲಿ ಮಾನವೀಯ ದೃಷ್ಟಿಯಿಂದ ಖಾಸಗಿ ಆಸ್ಪತ್ರೆಗಳು ಕೋವಿಡ್ ನಿಯಮಾವಳಿಗಳನ್ನು ಪಾಲಿಸಬೇಕೆಂದರು.

ಸಭೆಯಲ್ಲಿ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್, ಎಸ್.ಪಿ. ಹನುಮಂತರಾಯ, ಕೋವಿಡ್ ನೋಡಲ್ ಅಧಿಕಾರಿ ಪ್ರಮೋದ್‌ನಾಯಕ್, ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಜಯಪ್ರಕಾಶ್, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ರಾಘವನ್, ಡಾ.ಶಶಿಧರ್, ಡಾ.ಗಿರೀಶ್, ಡಾ.ರವಿ ಮತ್ತಿತರೆ ತಜ್ಞ ವೈದ್ಯರು ಉಪಸ್ಥಿತರಿದ್ದರು.

# ಆಕ್ಸಿಜನ್‌ಗೆ ಗ್ರೀನ್ ಕಾರಿಡಾರ್ ಕಲ್ಪಿಸಿ

## ಆಕ್ಸಿಜನ್ ಉತ್ಪಾದನೆ, ಸಾಗಣೆಯ ಸಮಸ್ಯೆ ಬಗೆಹರಿಸಲು ಸಿಎಂ ಸೂಚನೆ

ಬೆಂಗಳೂರು, ಮೇ 3 – ಚಾಮರಾಜನಗರ ಘಟನೆ ನಂತರ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ, ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಲಭ್ಯವಿರುವ ಔಷಧಿ ಹಾಗೂ ಆಕ್ಸಿಜನ್ ಸೇರಿದಂತೆ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿದೆ.

ತಮ್ಮ ಅಧಿಕೃತ ನಿವಾಸದಲ್ಲಿ ಸಭೆ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸರ್ಕಾರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಕೊರತೆ ನೀಗಿಸಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಹಾಗೂ ಆಕ್ಸಿಜನ್ ಸಾಗಣೆಗೆ ಗ್ರೀನ್ ಕಾರಿಡಾರ್ ರೂಪಿಸಬೇಕೆಂದು ತಿಳಿಸಿದ್ದಾರೆ.

ಜಿಲ್ಲಾಸ್ಪತ್ರೆಗಳ ಸ್ಥಿತಿಗತಿ ಬಗ್ಗೆ ವರದಿ ಸಂಗ್ರಹಿಸುವಂತೆಯೂ ಅಧಿಕಾರಿಗಳಿಗೆ ಮುಖ್ಯಮಂತ್ರಿ ಹೇಳಿದ್ದಾರೆ.

ಈಗ ಕೇಂದ್ರ ಸರ್ಕಾರವು ಹಂಚಿಕೆ ಮಾಡಿರುವ ಆಕ್ಸಿಜನ್ ಕೋಟಾದಲ್ಲಿ ಯಾವುದೇ ರೀತಿ ಕಡಿತವಾಗದಂತೆ ಸರಬರಾಜು ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಯಡಿಯೂರಪ್ಪ ತಿಳಿಸಿದ್ದಾರೆ. ಆಕ್ಸಿಜನ್ ಟ್ಯಾಂಕರ್‌ಗಳ ಫಿಲ್ಲಿಂಗ್ ಅವಧಿಯನ್ನು ಕಡಿತಗೊಳಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಆಕ್ಸಿಜನ್ ಟ್ಯಾಂಕರ್‌ಗಳು ತಡೆರಹಿತ ಪ್ರಯಾಣಕ್ಕಾಗಿ ಗ್ರೀನ್ ಕಾರಿಡಾರ್‌ಗಳನ್ನು ಒದಗಿಸಬೇಕು ಎಂದು ತಿಳಿಸಿದ್ದಾರೆ.

ಟೋಲ್‌ಗಳಲ್ಲಿ ಅನಗತ್ಯ ವಿಳಂಬ ತಪ್ಪಿಸಲು ಟೋಲ್‌ಗಳಿಗೆ ನಿರ್ದೇಶನ ನೀಡಬೇಕು.

ನೈಟ್ರೋಜನ್ ಮತ್ತಿತರೆ ಅನಿಲಗಳ ಸಾಗಣೆ ಟ್ಯಾಂಕರ್‌ಗಳನ್ನು ಆಕ್ಸಿಜನ್ ಸಾಗಣೆಗೆ ಪರಿವರ್ತಿಸಲು ಕ್ರಮವಹಿಸಬೇಕು.

ಆಕ್ಸಿಜನ್ ಉತ್ಪಾದಕರು ಮತ್ತು ಸರಬರಾಜುದಾರರು ಆಕ್ಸಿಜನ್ ಸರಬರಾಜಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿದ್ದಲ್ಲಿ ನೇರವಾಗಿ ನಿಯೋಜಿಸಲ್ಪಟ್ಟ ಅಧಿಕಾರಿಗೆ ಸಂಪರ್ಕಿಸಿ ತಮ್ಮ ಸಮಸ್ಯೆ ಗಳನ್ನು ಬಗೆಹರಿಸಿಕೊಂಡು ತಡೆರಹಿತವಾಗಿ ಆಕ್ಸಿಜನ್ ಪೂರೈಕೆ ಮಾಡಬೇಕು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

# ಐಪಿಎಲ್‌ಗೆ ಕೊರೊನಾ ಕಾಟ

ನವದೆಹಲಿ ಮೇ 3 – ಚೆನ್ನೈ ಸೂಪರ್ ಕಿಂಗ್ಸ್ ಬೌಲಿಂಗ್ ತರಬೇತುದಾರ ಎಲ್. ಬಾಲಾಜಿ ಅವರಲ್ಲಿ ಕೊರೊನಾ ಸೋಂಕು ಕಂಡು ಬಂದಿದೆ. ಹೀಗಾಗಿ ದೆಹಲಿಯಲ್ಲಿ ನಡೆಯಬೇಕಿರುವ ಐ.ಪಿ.ಎಲ್. ಪಂದ್ಯಗಳ ಬಗ್ಗೆ ಬಿ.ಸಿ.ಸಿ.ಐ.ಗೆ ತೊಡಕುಗಳು ಎದುರಾಗಿವೆ.

ಇದಕ್ಕೂ ಮುಂಚೆ ಕೊಲ್ಕೊತಾ ನೈಟ್ ರೈಡರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳ ನಡುವೆ ಅಹಮದಾಬಾದ್‌ನಲ್ಲಿ ನಡೆಯಬೇಕಿದ್ದ ಪಂದ್ಯವನ್ನು ಮುಂದೂಡಲಾಗಿತ್ತು. ಕೊಲ್ಕೊತಾ ನೈಟ್ ರೈಡರ್ಸ್ ತಂಡದ ವರುಣ್ ಚಕ್ರವರ್ತಿ ಹಾಗೂ ಸಂದೀಪ್ ವಾರಿಯರ್ ಅವರಿಗೆ ಪಾಸಿಟಿವ್ ಬಂದ ನಂತರ ಕೊಲ್ಕೊತಾದ ಇಡೀ ತಂಡವನ್ನು ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ.

**ಒಂದು ಪಂದ್ಯ ಮುಂದೂಡಿಕೆ, ಇನ್ನಷ್ಟು ಪಂದ್ಯಗಳ ಮೇಲೆ ಪರಿಣಾಮ**

ಆನಂತರದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬಾಲಾಜಿ ಅವರಿಗೆ ಕೊರೊನಾ ಸೋಂಕಿರುವುದು ಕಂಡು ಬಂದಿದೆ. ಆದರೆ, ಚೆನ್ನೈ ತಂಡದ ಇತರೆ ಆಟಗಾರರ ಫಲಿತಾಂಶ ನೆಗೆಟಿವ್ ಬಂದಿದೆ. ಸಾಕಷ್ಟು ಸೋಂಕಿತರಿಗೆ ಐದು ಇಲ್ಲವೇ ಆರನೇ ದಿನಗಳ ನಂತರ ಲಕ್ಷಣಗಳು ಕಂಡು ಬರುತ್ತವೆ.

ಈ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ನಡೆಯಬೇಕಿರುವ ಮುಂದಿನ ಎರಡು ಪಂದ್ಯಗಳ ಬಗ್ಗೆ ಅನಿಶ್ಚಿತತೆ ಉಂಟಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

# ಹೊನ್ನಾಳಿ: ವಲಸೆ ಬಂದವರಲ್ಲಿ 6 ಜನರಿಗೆ ಪಾಸಿಟಿವ್

ಹೊನ್ನಾಳಿ, ಮೇ 3- ತಾಲ್ಲೂಕಿಗೆ ಬೆಂಗಳೂರು ಹಾಗೂ ಇತರೆಡೆಗಳಿಂದ ಈವರೆಗೆ ಆಗಮಿಸಿದವರ ಸಂಖ್ಯೆ 406 ಜನರು. ಅದರಲ್ಲಿ 378 ಜನ ಬೆಂಗಳೂರಿನಿಂದ ಬಂದವರಾಗಿದ್ದು, 28 ಜನ ಹೊರರಾಜ್ಯ ಸೇರಿದಂತೆ ಇತರೆಡೆಗಳಿಂದ ಬಂದಿರುವುದಾಗಿ ತಹಶೀಲ್ದಾರ್ ಬಸನಗೌಡ ಕೋಟೂರ್ ಹೇಳಿದರು.

ವಲಸೆ ಬಂದ 406 ಜನರಲ್ಲಿ ಈವರೆಗೆ 239 ಜನರನ್ನು ಆರೋಗ್ಯ ಇಲಾಖೆ ಪರಿಶೀಲನೆ ಮಾಡಿದ್ದು, 6 ಜನರಿಗೆ ಪಾಸಿಟಿವ್ ಬಂದಿದೆ. ಅವರುಗಳಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಉಳಿದ 267 ಜನರನ್ನು ತಪಾಸಣೆ ನಡೆಸಲಾಗುತ್ತಿದೆ. ಮಾದನಬಾವಿ ಗ್ರಾಮದಲ್ಲಿ ಕೋವಿಡ್‌ಗೆ ಸಂಬಂಧಿಸಿದಂತೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಹೊನ್ನಾಳಿ ಪಟ್ಟಣದಲ್ಲಿ ತರಕಾರಿ ವ್ಯಾಪಾರ ವಹಿವಾಟು ನಡೆಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೌಲಭ್ಯ ಕಲ್ಪಿಸಲು ಇಂದು ಸಂಜೆ ಸಭೆ ಕರೆಯಲಾಗಿದೆ ಎಂದರು.

# ದೆಹಲಿಯಲ್ಲಿ ಅಂತ್ಯಸಂಸ್ಕಾರಕ್ಕೆ ಕುಳ್ಳು ಬಳಕೆ

ನವದೆಹಲಿ, ಮೇ 3 – ದೆಹಲಿಯಲ್ಲಿ ಕೊರೊನಾ ಸಾವುಗಳ ಸಂಖ್ಯೆ ಹೆಚ್ಚಾಗುತ್ತಿರುವ ನಡುವೆಯೇ, ಅಂತ್ಯಸಂಸ್ಕಾರಕ್ಕೆ ಕಟ್ಟಿಗೆಯ ಕೊರತೆಯಾಗಿದೆ. ಈ ಹಿನ್ನೆಲೆಯಲ್ಲಿ ಅಂತ್ಯಕ್ರಿಯೆಗೆ ಕುಳ್ಳು ಹಾಗೂ ಹುಲ್ಲು ಬಳಸಲು ದೆಹಲಿಯ ಎರಡೂ ಪಾಲಿಕೆಗಳು ಅನುಮತಿ ನೀಡಿವೆ.

ದೆಹಲಿ ನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಗೋಶಾಲೆಗಳಲ್ಲಿ ದೊರೆಯುವ ಸೆಗಣಿಯನ್ನು ಕುಳ್ಳಾಗಿ ಪರಿವರ್ತಿಸಲಾಗುವುದು. ಇದಕ್ಕಾಗಿ ಸಿ.ಎಸ್.ಆರ್. ನಿಧಿಯಿಂದ ನೆರವು ನೀಡಲಾಗುವುದು ಎಂದು ಉತ್ತರ ದೆಹಲಿ ನಗರ ಪಾಲಿಕೆಯ ಮೇಯರ್ ಜೈ ಪ್ರಕಾಶ್ ತಿಳಿಸಿದ್ದಾರೆ.

# ನಿಷೇಧಾಜ್ಞೆ ಮುಗಿಯುವವರೆಗೆ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಲಸಿಕೆ



ದಾವಣಗೆರೆ, ಮೇ 03- ಮೋತಿ ವೀರಪ್ಪ ಕಾಲೇಜಿನ ಆವರಣದಲ್ಲಿ ನಡೆಯುತ್ತಿದ್ದ ಲಸಿಕಾಕರಣ ವ್ಯವಸ್ಥೆಯನ್ನು ಇನ್ನು ಮುಂದೆ ಆ ಸ್ಥಳದ ಬದಲು ಚಿಗಟೇರಿ ಆಸ್ಪತ್ರೆ ಒಳಗಡೆ ಇರುವ ಮಕ್ಕಳ ಮತ್ತು ಹೆರಿಗೆ ಆಸ್ಪತ್ರೆ ಕೊಠಡಿ ಸಂಖ್ಯೆ 34ರಲ್ಲಿ ಲಸಿಕಾಕರಣವನ್ನು ಮಾಡಲಾಗುವುದು.

ಇನ್ನು ಮುಂದೆ ಜಿಲ್ಲೆಯಾದ್ಯಂತ ಪ್ರತಿಯೊಂದು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಉಪಕೇಂದ್ರಗಳು ಹಾಗೂ ದಾವಣಗೆರೆ ನಗರದಲ್ಲಿರುವ ಚಾಮರಾಜಪೇಟೆಯ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿಯೂ ಕೋವಿಡ್-19 ಲಸಿಕಾಕರಣ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಲಸಿಕೆಯನ್ನು ಪಡೆಯುವವರು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿ, ಅದರ ಪ್ರತಿಯನ್ನು ಲಸಿಕಾಕರಣ ಕೇಂದ್ರಕ್ಕೆ ತರತಕ್ಕದ್ದು.

ಪ್ರಸ್ತುತವಾಗಿ 45 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಸಿಕೆಯನ್ನು ನೀಡಲಾಗುತ್ತಿದ್ದು, 18 ವರ್ಷದಿಂದ 45 ವರ್ಷದೊಳಗಿನವರಿಗೆ ಲಸಿಕಾಕರಣವನ್ನು ಮಾಡುವ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ.

**ರಂಜಾನ್ ರೋಜಾ ಸಮಯ**

ದಿನಾಂಕ : 04.05.2021
ಇಫ್ತೇಯಾರಿ ಸಮಯ : 6-49
ದಿನಾಂಕ 05.05.2021
ಸಹೇರಿ ಸಮಯ : 4-45

# ಸಿ.ಜಿ. ಆಸ್ಪತ್ರೆಯ ಸಿಬ್ಬಂದಿ ಕೊರತೆ ಇನ್ನೂ ನೀಗಿಲ್ಲ

ದಾವಣಗೆರೆ, ಮೇ 3 - ಕೊರೊನಾ ಮೊದಲ ಅಲೆ ಹೋಗಿ ಎರಡನೇ ಅಲೆ ತಾರಕಕ್ಕೇರುತ್ತಿದೆ. ಆದರೆ, ಮೊದಲ ಅಲೆಯಲ್ಲಿ ಕಂಡು ಬಂದ ವೆಂಟಿಲೇಟರ್, ಸಿಬ್ಬಂದಿ ಹಾಗೂ ಸ್ಟಾಫ್ ನರ್ಸ್‌ಗಳ ಕೊರತೆ ಸಮಸ್ಯೆ ಇನ್ನೂ ನೀಗಿಲ್ಲ.

ಹೆಸರಿಗೆ ಮಾತ್ರ ವೆಂಟಿಲೇಟರ್‌ಗಳು ಖಾಲಿ ಇವೆ. ಆದರೆ, ರೋಗಿಗಳಿಗೆ ಮಾತ್ರ ಸೌಲಭ್ಯ ಸಿಗುತ್ತಿಲ್ಲ. ಕೊರೊನಾದಿಂದ ಸಾವು - ಬದುಕಿನ ಹೋರಾಟ ನಡೆಸುತ್ತಿರುವ ರೋಗಿಗಳಿಗೆ, ಈ ವೆಂಟಿಲೇಟರ್‌ಗಳು ಕನ್ನಡಿಯೊಳಗಿನ ಗಂಟಿನಂತಾಗಿವೆ.

ಕಳೆದ ಬಾರಿ ಕೊರೊನಾ ಸೋಂಕು ತಾರಕಕ್ಕೇರಿದ ಸಂದರ್ಭದಲ್ಲೂ ಸಿಬ್ಬಂದಿ ಕೊರತೆ ವಿಷಯ ಕಾಡಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಪಿಎಂ - ಕೇರ್ಸ್ ನಿಧಿಯ ಮೂಲಕ ವೆಂಟಿಲೇಟರ್‌ಗಳನ್ನು ಕಳಿಸಲಾಗಿತ್ತು. ಆದರೆ, ಸಿಬ್ಬಂದಿ ಕೊರತೆಯಿಂದ ಬಳಕೆಗೆ ಹಿನ್ನಡೆಯಾಗಿತ್ತು.

ಈ ನಡುವೆ, ಮೊದಲ ಕೊರೊನಾ ಅಲೆ ಉತ್ತುಂಗಕ್ಕೆ ತಲುಪಿ ನಂತರ ಬಹುತೇಕ ಇಲ್ಲ ಎನ್ನುವ ಹಂತಕ್ಕೆ ಹೋಯಿತು. ಈಗ ಎರಡನೇ ಅಲೆ ಅಬ್ಬರಿಸುತ್ತಿದೆ. ಇಷ್ಟೆಲ್ಲ ಕಾಲ ಕಳೆದರೂ ಸಿಬ್ಬಂದಿ ನೇಮಕಕ್ಕೆ ಕಾಲ ಮಾತ್ರ ಕೂಡಿ ಬಂದಿಲ್ಲ. ಸರ್ಕಾರಕ್ಕೆ ಮನವಿ ಸಲ್ಲಿಸುವುದರಲ್ಲೇ ವರ್ಷ ಉರುಳಿ ಹೋಗಿದೆ.

**ಅಲೆ ಬದಲಾದರೂ ಪರಿಸ್ಥಿತಿ ಬದಲಾಗಿಲ್ಲ**

ಪ್ರಸಕ್ತ ಕೊರೊನಾದ ಎರಡನೇ ಅಲೆ ಉಲ್ಬಣಿಸಿ ಇರುವ ಆಕ್ಸಿಜನ್ ಬೆಡ್‌ಗಳೆಲ್ಲವೂ ತುಂಬಿಕೊಂಡಿವೆ. ದಿಕ್ಕು ಸಿಗದೇ ಓಡುತ್ತಿರುವ ಕೊರೊನಾದ ಎರಡನೇ ಅಲೆ ಮುಂದಿನ ದಿನಗಳಲ್ಲಿ ಯಾವ ಹಂತಕ್ಕೆ ತಲುಪಲಿದೆ ಎಂಬುದನ್ನು ಊಹಿಸಲು ಸಾಧ್ಯವಾಗದೇ ಕೇಂದ್ರ ಸರ್ಕಾರದ ವಿಜ್ಞಾನಿಗಳೇ ಕೈ ಚೆಲ್ಲಿದ್ದಾರೆ.


ಇಂತಹ ಸಂದರ್ಭದಲ್ಲಿ ಸರ್ಕಾರಿ ಆಸ್ಪತ್ರೆಗಳು ಕೊರೊನಾ ಅಲೆ ಎದುರಿಸಲು ಅಗತ್ಯವಾಗಿ ಬೇಕಾಗಿದ್ದು ಸಿಬ್ಬಂದಿ. ಅಂತಹ ಸಿಬ್ಬಂದಿಯ ಕೊರತೆ ನೀಗಿಸುವ ಮಾತುಗಳು ವರ್ಷದಿಂದಲೂ ಕೇಳಿ ಬರುತ್ತಲೇ ಇವೆ ಎಂಬುದೇ ವಿಪರ್ಯಾಸ.

ಜಿಲ್ಲಾ ಆಸ್ಪತ್ರೆಗಳಲ್ಲಿರುವ 15 ವೆಂಟಿಲೇಟರ್‌ಗಳ ನಿರ್ವಹಣೆಗೆ ಮಾನವ ಶಕ್ತಿ ಬೇಕಿದೆ. ಇದಕ್ಕಾಗಿ ಖಾಸಗಿ ಅನಸ್ತೇಷಿಯಾ ವೈದ್ಯರ ನೆರವು ಪಡೆಯಲಾಗುವುದು ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಸೋಮವಾರ ತಿಳಿಸಿದ್ದಾರೆ.

ಈ ವೆಂಟಿಲೇಟರ್‌ಗಳ ನಿರ್ವಹಣೆಗೆ 20 ನರ್ಸ್ ಹಾಗೂ 10 ವೈದ್ಯರು ಬೇಕಿದೆ. ಆದರೆ, ಪ್ರಸಕ್ತ ಹಲವಾರು ವೈದ್ಯರೇ ಕೊರೊನಾ ಸೋಂಕಿಗೆ ಸಿಲುಕಿರುವುದರಿಂದ ಸಿಬ್ಬಂದಿ ಪಡೆಯುವುದು ಕಷ್ಟವಾಗುತ್ತಿದೆ. ಆದರೂ, ಖಾಸಗಿ ಸಿಬ್ಬಂದಿಯ ಮೂಲಕವಾದರೂ ವೆಂಟಿಲೇಟರ್ ನಿರ್ವಹಿಸಲಾಗುವುದು ಎಂದವರು ಹೇಳಿದ್ದಾರೆ.

ಎರಡು ಕೊರೊನಾ ಅಲೆಗಳನ್ನು ಈಗಾಗಲೇ ಕಂಡಾಗಿದೆ. ಇನ್ನೂ ಹಲವು ಅಲೆಗಳು ಬರಲಿವೆ ಎಂದು ಸರ್ಕಾರದ ಪರಿಣಿತರು ಹೇಳುತ್ತಿದ್ದಾರೆ. ಆ ಅಲೆಗಳು ಬರುವುದರ ಒಳಗಾದರೂ ಸಿ.ಜಿ. ಆಸ್ಪತ್ರೆ ಸಿಬ್ಬಂದಿ ಕೊರತೆ ನೀಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

# 13 ರಾಜ್ಯಗಳಲ್ಲಿ ಕೊರೊನಾ ಇಳಿಮುಖದ ಸೂಚನೆ



ನವದೆಹಲಿ, ಮೇ 3 – ದೆಹಲಿ ಹಾಗೂ ಮಹಾರಾಷ್ಟ್ರ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಪ್ರತಿದಿನ ಕಂಡು ಬರುವ ಕೊರೊನಾ ಸೋಂಕುಗಳ ಸಂಖ್ಯೆ ಇಳಿಮುಖವಾಗಿದೆ. ಇದು ಆರಂಭಿಕ ಹಂತದ ಸಂಕೇತವಾಗಿದ್ದು, ಸೋಂಕು ನಿಯಂತ್ರಣಕ್ಕೆ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್, ದೆಹಲಿ, ಛತ್ತೀಸ್‌ಘಡ, ಮಹಾರಾಷ್ಟ್ರ, ಪಂಜಾಬ್, ಜಾರ್ಖಂಡ್ ಹಾಗೂ ಉತ್ತರ ಪ್ರದೇಶ ಸೇರಿದಂತೆ 13 ರಾಜ್ಯಗಳಲ್ಲಿ ಕೊರೊನಾ ಸೋಂಕು ಇಳಿಮುಖವಾಗುವ ಲಕ್ಷಣ ತೋರುತ್ತಿದೆ.

ಡಮನ್ ಮತ್ತು ಡಿಯು, ಗುಜರಾತ್, ಜಾರ್ಖಂಡ್, ಲಡಾಕ್, ಲಕ್ಷದ್ವೀಪ, ಮಧ್ಯ ಪ್ರದೇಶ, ಪಂಜಾಬ್, ತೆಲಂಗಾಣ, ಉತ್ತರ ಪ್ರದೇಶ ಹಾಗೂ ಉತ್ತರಾಖಂಡಗಳಲ್ಲೂ ಇಳಿಮುಖ ಸಂಕೇತಗಳು ದೊರೆಯುತ್ತಿವೆ.


ಮತ್ತೊಂದೆಡೆ, ಬಿಹಾರ, ರಾಜಸ್ಥಾನ, ಹರಿಯಾಣ, ತಮಿಳುನಾಡು, ಆಂಧ್ರ ಪ್ರದೇಶ, ಕೇರಳ, ಕರ್ನಾಟಕ ಹಾಗೂ ಪಶ್ಚಿಮ ಬಂಗಾಳಲ್ಲಿ ಸೋಂಕು ಏರುಮುಖವಾಗುವ ಲಕ್ಷಣ ತೋರುತ್ತಿದೆ ಎಂದವರು ತಿಳಿಸಿದ್ದಾರೆ.

ಆದರೆ, ಇದು ತೀರಾ ಆರಂಭಿಕ ಸಂಕೇತ ಎಂದಿರುವ ಅಗರ್‌ವಾಲ್, 12 ರಾಜ್ಯಗಳಲ್ಲಿ ಈಗಲೂ ಎರಡು ಲಕ್ಷಕ್ಕಿಂತ ಹೆಚ್ಚು ಸಕ್ರಿಯ ಸೋಂಕಿತರಿದ್ದಾರೆ ಎಂದು ಹೇಳಿದ್ದಾರೆ.

# ರಾಜ್ಯದಲ್ಲಿ 44,438 ಜನರಿಗೆ ಸೋಂಕು

ಬೆಂಗಳೂರು, ಮೇ 3 – ರಾಜ್ಯದಲ್ಲಿ ಸೋಮವಾರ 44,438 ಕೊರೊನಾ ಸೋಂಕಿತರು ಕಂಡು ಬಂದಿದ್ದು, 239 ಜನ ಸಾವನ್ನಪ್ಪಿದ್ದಾರೆ. ಇದೇ ದಿನ 20,901 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಒಂದರಲ್ಲೇ 22,112 ಸೋಂಕಿತರು ಪತ್ತೆಯಾಗಿದ್ದು, 115 ಜನ ಸಾವನ್ನಪ್ಪಿದ್ದಾರೆ. ಮೈಸೂರಿನಲ್ಲಿ 2,685, ತುಮಕೂರಿನಲ್ಲಿ 2,361, ಹಾಸನದಲ್ಲಿ 1,673, ಧಾರವಾಡದಲ್ಲಿ 1,021 ಸೋಂಕಿತರು ಪತ್ತೆಯಾಗಿದ್ದಾರೆ.

# ನಿರ್ವಹಣಾ ಮಂಡಳಿಗೆ ಜಯರುದ್ರೇಶ್ ಅಧ್ಯಕ್ಷ







(1ನೇ ಪುಟದಿಂದ) ಬಕ್ಕೇಶಪ್ಪ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ಮೊನ್ನೆ ನಡೆದ ಬ್ಯಾಂಕಿನ ಕಾರ್ಯ ನಿರ್ವಾಹಕ ಮಂಡಳಿ ಸಭೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದನ್ವಯ ಈ ಮಂಡಳಿಯನ್ನು ರಚಿಸಲಾಗಿದೆ.

ಬ್ಯಾಂಕಿನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ, ನಿರ್ದೇಶಕರುಗಳಾದ ಬಿ.ಸಿ. ಉಮಾಪತಿ, ಮತ್ತಿಹಳ್ಳಿ ವೀರಣ್ಣ, ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ನಲ್ಲೂರು ಎಸ್. ರಾಘವೇಂದ್ರ, ಇ.ಎಂ. ಮಂಜುನಾಥ, ವಿ. ವಿಕ್ರಮ್, ವೃತ್ತಿಪರ ನಿರ್ದೇಶಕರುಗಳಾದ ಮುಂಡಾಸ್ ವೀರೇಂದ್ರ, ಮಲ್ಲಿಕಾರ್ಜುನ ಕಣವಿ, ವಿಶೇಷ ಆಹ್ವಾನಿತರು ಗಳಾದ ಬೆಳ್ಳೂಡಿ ಮಂಜುನಾಥ್, ಎಂ. ದೊಡ್ಡಪ್ಪ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ್ ಸ್ವಾಗತಿಸಿದರು. ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ವಂದಿಸಿದರು.

# ಚಾಮರಾಜನಗರದ ಸಾವಿನ ಘಟನೆ : ಮುತ್ತಣ್ಣ ವ್ಯಾಕುಲತೆ

ದಾವಣಗೆರೆ,ಮೇ 3- ಚಾಮರಾಜ ನಗರದ ಆಸ್ಪತ್ರೆಯಲ್ಲಿ ಆಕ್ಸಿಜನ್ ಸಿಗದ ಹಿನ್ನೆಲೆಯಲ್ಲಿ ಕೊರೊನಾದಿಂದ ಸಾವಿಗೀಡಾಗಿರುವ ಘಟನೆ ಬಗ್ಗೆ ವ್ಯಾಕುಲತೆ ವ್ಯಕ್ತಪಡಿಸಿರುವ ಬಿಜೆಪಿ ಮುಖಂಡ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಈ ಘಟನೆಯಲ್ಲಿ ಸಾವಿಗೀಡಾಗಲು ನಿಜವಾಗಿಯೂ ಇದ್ದ ಕಾರಣ ಕುರಿತು ತನಿಖೆಗೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 3.5.2021ರ ಸೋಮವಾರ ನಿಧನರಾದ
ದಾವಣಗೆರೆ ತರಳಬಾಳು ಕಾಲೇಜಿನ ರಸಾಯನಶಾಸ್ತ್ರ ಉಪನ್ಯಾಸಕರಾಗಿದ್ದ,
ಪ್ರಸ್ತುತ ಚಳ್ಳಕೆರೆ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ
**ಶ್ರೀ ಟಿ. ಮಂಜುನಾಥ್** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು
ಭರಿಸುವ ಶಕ್ತಿಯನ್ನು ದಯಾಮಯನಾದ ಭಗವಂತನು
ಅವರ ಕುಟುಂಬಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

**ಸಹ ಉಪನ್ಯಾಸಕರು ಹಾಗೂ ಹಳೆಯ ವಿದ್ಯಾರ್ಥಿಗಳು**



**ವಿವಾಹ ಆರತಕ್ಷತೆ ಮುಂದೂಡಿಕೆ**

ನಮ್ಮ ಸುಪುತ್ರಿ
**ಚಿ॥ಕುಂ॥ಸೌ॥ ಹೆಚ್. ಪ್ರಿಯಾಂಕ** B.E. (Civil)
ಹಾಗೂ
**ಚಿ॥ರಾ॥ ವೀರೇಶ್ ದಳವಾಯಿ** B.E. (E&E)
(ಶ್ರೀಮತಿ ಅನಸೂಯ, ಶ್ರೀ ಭೀಮಣ್ಣ ದಳವಾಯಿ, ಚನ್ನೂರು ಇವರ ಸುಪುತ್ರ)

ಇವರ ವಿವಾಹ ಆರತಕ್ಷತೆಯನ್ನು ದಿನಾಂಕ 04-05-2021ರ ಮಧ್ಯಾಹ್ನ ಕೆ.ಇ.ಬಿ. ಸಮುದಾಯ ಭವನ, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕೋವಿಡ್-19ರ 2ನೇ ಅಲೆಯು ತೀವ್ರವಾಗಿ ಹರಡುತ್ತಿರುವ ಕಾರಣ, ರಾಜ್ಯ ಸರ್ಕಾರವು ದಿನಾಂಕ 12-05-2021 ರವರೆಗೆ ಕೋವಿಡ್ ಕರ್ಫ್ಯೂ ಜಾರಿ ಮಾಡಿದೆ. ನಮ್ಮ ನಿಮ್ಮೆಲ್ಲರ ಸುರಕ್ಷತೆಯ ದೃಷ್ಟಿಯಿಂದ ದಿನಾಂಕ 04-05-2021ರ ಮಂಗಳವಾರ ಮಧ್ಯಾಹ್ನ 11-30ಕ್ಕೆ ನಡೆಯಬೇಕಿದ್ದ 'ವಿವಾಹ ಆರತಕ್ಷತೆ ಕಾರ್ಯಕ್ರಮ'ವನ್ನು ಮುಂದೂಡಲಾಗಿದೆ.

ತಮ್ಮ ವಿಶ್ವಾಸಿಗಳು,
**ಶ್ರೀಮತಿ ಪುಷ್ಪ ಮತ್ತು ಶ್ರೀ ಜಿ. ಹರಿಹರೇಶ್ವರ**
ಕಿರಿಯ ಇಂಜಿನಿಯರ್ (ವಿ), 220 ಕೆ.ವಿ.ಎಸ್.ಆರ್.ಎಸ್., ವಿದ್ಯುತ್ ನಗರ, ಹದಡಿ ರಸ್ತೆ, ದಾವಣಗೆರೆ.
ಮೊ. 94484 42661, 83105 40471, 81059 45225


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte